ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari
ಸ್ವಾಭಿಮಾನಿ ಸಹಕಾರಿ

Pages - 28, ₹12
Volume -14
Issue - 01
January - 2017

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ



ಹೊಸ ಆರ್ಥಿಕ ಪರ್ವಕ್ಕಾಗಿ ಸೌಹಾರ್ದ ಸಹಕಾರಿಗಳು:
ನಗದು ರಹಿತ ವ್ಯವಹಾರದ ಕಡೆಗೆ ಸಹಕಾರಿಗಳ ನಡೆ

e Stamping

14 ಸಂಕ್ರಾತಿ

1000 ಸೌಹಾರ್ದ ಸಹಕಾರಿಗಳ ಇ-ಸ್ಟ್ಯಾಂಪಿಂಗ್ ಕೇಂದ್ರಗಳ ಸಾವಿರದ ಸಂಭ್ರಮ

26 ಗಣರಾಜ್ಯೋತ್ಸವ

“

ಸರಳ, ದಕ್ಷ ಹಾಗೂ ನಿಸ್ವಾರ್ಥ ಜನಸೇವೆಯಲ್ಲಿ ಮೈಲಿಗಲ್ಲು ಸ್ಥಾಪಿಸಿದ, ರಾಜ್ಯದ ಸಹಕಾರಿಗಳ ಹೃದಯವನ್ನು ಗೆದ್ದ ಧೀಮಂತ ನಾಯಕ ದಿ. ಶ್ರೀ ಎಚ್.ಎಸ್. ಮಹದೇವಪ್ರಸಾದ ಇವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಪ್ರಾರ್ಥಿಸೋಣ.

”

ಸೌಹಾರ್ದ ಸಹಕಾರಿ ಕ್ಷೇತ್ರದ ಮಿತ್ರ, ಮಹಾಪೋಷಕ, ಕರ್ನಾಟಕ ಸರಕಾರದ ಸಹಕಾರ ಹಾಗೂ ಸಕ್ಕರೆ ಸಚಿವರಾದ ದಿ. ಹೆಚ್.ಎಸ್. ಮಹದೇವಪ್ರಸಾದ ಸಹಕಾರಿಗಳ ಸಹೃದಯದಲ್ಲಿ ಸದಾ ಅವಿಸ್ಮರಣೀಯರು

ಕರ್ನಾಟಕ ಸರಕಾರದ ಸಹಕಾರ ಹಾಗೂ ಸಕ್ಕರೆ ಸಚಿವರಾಗಿದ್ದ ಶ್ರೀ ಹೆಚ್.ಎಸ್.ಮಹದೇವಪ್ರಸಾದರವರು ದಿನಾಂಕ 03-01-2017ರಂದು ತೀವ್ರ ಹೃದಯಾಘಾತದಿಂದ ಅಕಾಲಿಕವಾಗಿ ನಿಧನರಾಗಿರುವುದು ಸಹಕಾರ ಕ್ಷೇತ್ರಕ್ಕೆ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ತುಂಬಲಾದ ನಷ್ಟವಾಗಿದೆ. ಶ್ರೀಯುತರು ಅವರ ಅಧಿಕಾರಾವಧಿಯಲ್ಲಿ ಸೌಹಾರ್ದ ಸಹಕಾರಿಗಳ ಬಹುತೇಕ ಸಮಸ್ಯೆಗಳಿಗೆ ಸ್ಪಂದಿಸುವ ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದರು. ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಎಲ್ಲೋ ಒಂದು ಎರಡು ಸೌಹಾರ್ದ ಸಹಕಾರಿಗಳು ತಪ್ಪು ಮಾಡುತ್ತಿರಬಹುದು, ಅವುಗಳ ಮೇಲೆ ಕ್ರಮ ಜರುಗಿಸೋಣ. ಆದರೆ, ಒಟ್ಟಾರೆ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಅವರುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸೌಹಾರ್ದ ಸಹಕಾರಿಯ ಕ್ಷೇತ್ರದ ಅಭಿವೃದ್ಧಿಗೆ ಸರಕಾರ ಬದ್ಧವಾಗಿದೆ ಎಂದು ಶ್ರೀಯುತರು ಸದಾಕಾಲ ಹೇಳುತ್ತಿದ್ದರು.

ಶ್ರೀಯುತರ ಕಾಲದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಗೆ 3 ಬಾರಿ ತಿದ್ದುಪಡಿಯಾಗಿ ಹಲವು ಅನುಕೂಲತೆಗಳನ್ನು ಕಲ್ಪಿಸಲಾಗಿದೆ. 2004 ರಿಂದ ನಿಯಮಗಳ ಬದಲಾವಣೆಯಾಗದೆ ಇದ್ದ ಸೌಹಾರ್ದ ಸಹಕಾರಿ ಕಾಯ್ದೆಯ ನಿಯಮಾವಳಿಗಳಿಗೆ 2015ರಲ್ಲಿ ನಿಯಮಾವಳಿಗಳನ್ನು ರಚಿಸಿ, ಸೌಹಾರ್ದ ಸಹಕಾರಿ ಕ್ಷೇತ್ರ ಸುಗಮವಾಗಿ ಕಾರ್ಯನಿರ್ವಹಿಸುವಂತೆ ದಾರಿ ಮಾಡಿಕೊಟ್ಟಿರುವ ಕೀರ್ತಿ ಅವರಿಗೆ ಸಲ್ಲಬೇಕು. ಶ್ರೀಯುತರ ಅವಧಿಯಲ್ಲಿ ಸಂಯುಕ್ತ ಸಹಕಾರಿಗೆ ಪ್ರತ್ಯೇಕವಾಗಿ ದಾವಾ ಪಂಚಾಯಿತಿ ನ್ಯಾಯಾಲಯ ಮಂಜೂರು ಮಾಡಿ, ಅದರ ಉದ್ಘಾಟನೆಯನ್ನು ಶ್ರೀಯುತರು ನೆರವೇರಿಸಿ, ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ ಹಾಗೂ ಸಾಧನೆಗಳಿಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿರುವುದು ಹೆಮ್ಮೆಯ ಸಂಗತಿ. ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ, ಆಡಳಿತ ಮಂಡಲಿ ಸದಸ್ಯರೊಡನೆ ಚರ್ಚೆ, ಸಂಯುಕ್ತ ಸಹಕಾರಿಯ ಕಟ್ಟಡದ ಭೂಮಿ ಪೂಜೆ, ವಿಭಾಗೀಯ ಕಛೇರಿಗಳ ಉದ್ಘಾಟನೆ, ವಿಭಾಗೀಯ ಸಮಾವೇಶಗಳು, ಅನೇಕ ಸೌಹಾರ್ದ ಸಹಕಾರಿಗಳ ಉದ್ಘಾಟನೆ, ದಶಮಾನೋತ್ಸವ, ನೂತನ ಕಟ್ಟಡಗಳ ಉದ್ಘಾಟನೆ, ಇ-ಸ್ಟಾಂಪಿಂಗ್ ಕೇಂದ್ರಗಳ ಉದ್ಘಾಟನೆ, ಸೌಹಾರ್ದ ಸಹಕಾರಿಗಳ ಅನೇಕ ದಿನಗಳ ಅಪೇಕ್ಷೆಯಾಗಿದ್ದ ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಗೆ ಚಾಲನೆ ಹೀಗೆ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಸೌಹಾರ್ದ ಸಹಕಾರಿಗಳ ಕಾರ್ಯಾಚರಣೆಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಪ್ರೋತ್ಸಾಹಿಸಿದ್ದರು. ಶ್ರೀಯುತರ ಅಕಾಲಿಕ ನಿಧನ ಸೌಹಾರ್ದ ಸಹಕಾರಿಗಳಿಗೆ ತುಂಬಲಾರದ ನಷ್ಟ. ಭಗವಂತನು ಶ್ರೀಯುತರ ಆತ್ಮಕ್ಕೆ ಶಾಂತಿಯನ್ನು ನೀಡಲಿ. ಅವರ ಅಗಲಿಕೆಯ ನೋವನ್ನು ತಾಳಿಕೊಳ್ಳುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಭಗವಂತನು ದಯಪಾಲಿಸಲಿ ಎಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪ್ರಾರ್ಥನೆಯಾಗಿದೆ.

ಶ್ರೀಯುತರು ರಾಜ್ಯದ ಸಹಕಾರಿ ಸಚಿವರಾಗಿ ರೈತಸ್ನೇಹಿ, ಅನೇಕ ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದರು. ಜೊತೆಗೆ ಸಕ್ಕರೆ ಸಚಿವರಾಗಿಯೂ ಸಹಕಾರಿ ಸಕ್ಕರೆ ಕಾರ್ಖಾನೆಗಳ ಅಭಿವೃದ್ಧಿಗಾಗಿಯೂ ಅನೇಕ ಯೋಜನೆಗಳನ್ನು ರೂಪಿಸಿ, ಕಾರ್ಯಗತಗೊಳಿಸಿದ್ದರು. ನೂತನ ವರ್ಷ 2017ರ ಪ್ರಾರಂಭದಲ್ಲಿ ಶ್ರೀಯುತರ ಅಕಾಲಿಕ ಸಾವು ಸಹಕಾರಿಗಳಿಗೆ ಈ ರೀತಿಯ ಆಘಾತವಾಗಿರುವುದು ಶೋಚನೀಯ. ಇರಲಿ ದೈವದಾಟವನ್ನು ಯಾರೂ ಗೆಲ್ಲಲು ಸಾಧ್ಯವಿಲ್ಲ. ಶ್ರೀಯುತರ ನಿರಂತರ ಪ್ರೋತ್ಸಾಹವನ್ನು ನೆನೆದುಕೊಳ್ಳುತ್ತಾ ಅದುವೇ ನಮ್ಮ ಶ್ರೀ ರಕ್ಷೆ ಎಂದುಕೊಂಡು ಮುಂದೆ ಸಾಗೋಣ.

2017 ನೂತನ ವರ್ಷದ, ಮಕರ ಸಂಕ್ರಾಂತಿ ಹಾಗೂ 68ನೇ ಗಣತಂತ್ರ ದಿನಾಚರಣೆ ತಮ್ಮೆಲ್ಲರಿಗೂ ಶುಭವಾಗಲಿ ಎಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಹಾರೈಸುತ್ತದೆ.

ಹೆಚ್.ವಿ.ರಾಜೀವ, ಉಪಾಧ್ಯಕ್ಷರು

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ : 080–23378375–80, 23474408, 23573291
ಇ–ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

ಒಳ ಪುಟಗಳಲ್ಲಿ . . .

ಜ್ಞಾನ ಜ್ಯೋತಿ 4
16ನೇ ತಂಡದ ಹತ್ತು ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ ತರಬೇತಿಯಿಂದ ಅಭಿವೃದ್ಧಿ ಸಾಧ್ಯ – ಶ್ರೀ ಹೆಚ್.ವಿ.ರಾಜೀವ 5
ಬಹು ಚಟುವಟಿಕೆಗಳ ತರಬೇತಿ – ಶ್ರೀ ಶರಣಗೌಡ ಜಿ. ಪಾಟೀಲ 6
ಸಹಕಾರ ಕ್ಷೇತ್ರ ಆರ್ಥಿಕ ಅಭಿವೃದ್ಧಿಗೆ ಪೂರಕ – ಶ್ರೀ ಕೆ.ಎಲ್. ನರಸಿಂಹಮೂರ್ತಿ 8
ನಿಬಂಧಕರ ಸುತ್ತೋಲೆ 10
ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ 12
ಪ್ರಶ್ನೆ – ಉತ್ತರ 19
ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ ಕಾಯ್ದೆ) – ಒಂದು ಪಕ್ಷಿನೋಟ 20
ವಿವಾದ, ವಿವಾದ ಏರ್ಪಡುವ ಸಂದರ್ಭಗಳು ಹಾಗೂ ವಿವಾದಗಳನ್ನು ಹೂಡುವ ಅಧಿಕಾರ 22
CASHLESS TRANSACTIONS 24
INDIAN COOPERATIVE MOVEMENT - A SWOT ANALYSIS 26
RBI NEWS - DECEMBER-2016 27

ಸಂಪಾದಕೀಯ

ಸಹಕಾರಿ ಕ್ಷೇತ್ರಕ್ಕೆ ಎಚ್ಚರಿಕೆಯ ಗಂಟೆ; ನಗದು ರಹಿತ ವ್ಯವಹಾರ (ಕ್ಯಾಶ್ಲೆಸ್) ನಿರ್ವಹಣೆಗೆ ಸಹಕಾರಿಗಳು

ಕೇಂದ್ರ ಸರಕಾರ ದೇಶದಲ್ಲಿ ರೂ. 500 ಹಾಗೂ ರೂ. 1000 ಮುಖಬೆಲೆಯ ನೋಟುಗಳ ಚಲಾವಣೆಯನ್ನು ರದ್ದುಗೊಳಿಸುವ ಮೂಲಕ ದೇಶದ ನಾಗರೀಕರು ಇನ್ನು ಮುಂದೆ ನಗದು ರಹಿತ ವ್ಯವಹಾರ (ಕ್ಯಾಶ್ಲೆಸ್) ನಿರ್ವಹಣೆಗೆ ಆದ್ಯತೆ ನೀಡುತ್ತಿರುವುದು ನಮ್ಮ ದೇಶ ಆಧುನೀಕರಣದತ್ತ ಹಾಗೂ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವತ್ತ ವೇಗವಾಗಿ ಸಾಗುತ್ತಿರುವುದು ಸ್ವಾಗತಾರ್ಹ ಹಾಗೂ ಶ್ಲಾಘನೀಯವಾದುದು.

ನೋಟುಗಳ ಚಲಾವಣೆ ರದ್ಧತಿ ಹಾಗೂ ಹೊಸ ನೋಟುಗಳು ನಿರೀಕ್ಷಿತ ಪ್ರಮಾಣದ ಪೂರೈಕೆಯ ವಿಷಯದಲ್ಲಿ ಕೇಂದ್ರ ಸರಕಾರ ಹಾಗೂ ಆರ್.ಬಿ.ಐ. ಸಹಕಾರ ಸಂಸ್ಥೆಗಳ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿದಂತಾಗಿದೆ. ಹಳೆಯ ನೋಟುಗಳನ್ನು ಸ್ವೀಕರಿಸುವ ಪ್ರಕ್ರಿಯೆಯಲ್ಲಿ ಹಾಗೂ ಹೊಸ ನೋಟುಗಳ ವಿತರಣೆ ಪ್ರಕ್ರಿಯೆಯಲ್ಲಿ ಸಹಕಾರಿ ಸಂಸ್ಥೆಗಳನ್ನು ಪರಿಗಣಿಸಬೇಕಿತ್ತು ಎಂಬುದು ನಮ್ಮ ನಿಮ್ಮೆಲ್ಲರ ಅಭಿಪ್ರಾಯ. ಇದು ದೇಶದ ಬೃಹತ್ ಸಮಸ್ಯೆಯಲ್ಲಿ ಸಹಕಾರಿಯಾಗುತ್ತಿತ್ತು. ಸೌಹಾರ್ದ ಸಹಕಾರಿಗಳಿಗೆ ಹಾಗೂ ಸಮಗ್ರ ಸಹಕಾರ ಕ್ಷೇತ್ರಕ್ಕೆ ಒಂದು ಸವಾಲು. ಕೆಲವರಲ್ಲಿ ತಮ್ಮ ಸಹಕಾರಿಯ ಭವಿಷ್ಯದ ಬಗ್ಗೆ ಆತಂಕಪಡುವಂತಾಗಿದೆ.

ಈ ಸಂದರ್ಭವನ್ನು ಸಹಕಾರ ಕ್ಷೇತ್ರ ಅವಕಾಶವೆಂದು ಪರಿಗಣಿಸಿ, ಸೌಹಾರ್ದ ಸಹಕಾರಿಗಳು ಪಾರದರ್ಶಕತೆ ಹಾಗೂ ವೃತ್ತಿಪರತೆಯನ್ನು ಅಳವಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಿದೆ. ಇದಕ್ಕೆ ಸಹಕಾರ ಸಂಸ್ಥೆಗಳಲ್ಲಿ ಹಾಗೂ ಸದಸ್ಯರಲ್ಲಿ "ನಗದು ರಹಿತ ವ್ಯವಹಾರ"ಗಳನ್ನು ಪ್ರಾರಂಭಿಸುವುದು ಇಂದಿನ ಅವಶ್ಯಕತೆಯಾಗಿದೆ. ನಗದು ರಹಿತ ವ್ಯವಹಾರಗಳನ್ನು ಹೇಗೆ ಮಾಡಬೇಕು, ಇದಕ್ಕೆ ಲಭ್ಯವಿರುವ ವಿವಿಧ ಪ್ಲಾಸ್ಟಿಕ್ ಹಣ (ವಿವಿಧ ರೀತಿಯ ಕಾರ್ಡ್‌ಗಳು) ಯಾವುವು ಎಂಬುದನ್ನು ಎಲ್ಲಾ ಸಹಕಾರಿಗಳು ತಿಳಿದುಕೊಂಡು ತಮ್ಮ ಸದಸ್ಯರಿಗೆ ಅವುಗಳ ಕಾರ್ಯಾಚರಣೆಯ ಬಗ್ಗೆ ಮಾಹಿತಿ ನೀಡುವುದು ಅಗತ್ಯವಾಗಿದೆ. ಹಿಂದೆ ಸರ್.ಎಂ.ವಿಶ್ವೇಶ್ವರಯ್ಯನವರು ಕೈಗಾರಿಕೆಗಳ ಪ್ರಾರಂಭದ ಹಂತದಲ್ಲಿ "ಕೈಗಾರೀಕರಣ ಇಲ್ಲವೇ ವಿನಾಶ" ಎಂದು ಮಾತು ಹೇಳಿದ್ದರು. ಈಗ ನಗದು ರಹಿತ ವ್ಯವಹಾರಗಳಿಗೆ ಸಂಬಂಧಿಸಿದಂತೆ "ಆಧುನಿಕ ತಂತ್ರಜ್ಞಾನ ಉಪಯೋಗ ಮಾಡಿಕೊಳ್ಳದಿದ್ದರೆ ಸಮಸ್ಯೆ ಎದುರಿಸಬೇಕಾಗುತ್ತದೆ ಅಥವಾ "ಅಪ್‌ಡೇಟ್ ಆಗಿ ಇಲ್ಲದಿದ್ದರೆ ಔಟ್ ಡೇಟ್ ಆಗ್ತೀರಾ" ಎಂದು ಹೇಳಬಹುದಾಗಿದೆ. ಆದ್ದರಿಂದ, ಸಹಕಾರಿ ಸಂಸ್ಥೆಗಳು ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್, ನೆಟ್ ಬ್ಯಾಂಕಿಂಗ್, ಆರ್.ಟಿ.ಜಿ.ಎಸ್., ಎನ್.ಇ.ಎಫ್.ಟಿ., ಚೆಕ್‌ಗಳು, ಪೇಟಿಎಂ, ಆಧಾರ್ ಕಾರ್ಡ್, ಎಂ.ಪಿ.ಎಸ್., ಯು.ಪಿ.ಐ. ಆಪ್, ಏರ್‌ಟೆಲ್ ಆಪ್, ವೋಲಾ ಆಪ್, ಯು.ಎಸ್.ಎಸ್.ಡಿ., ಇ–ವಾಲೆಟ್, ವಾಣಿಜ್ಯ ಬ್ಯಾಂಕುಗಳ ವಿವಿಧ ಆಪ್‌ಗಳ ಬಗ್ಗೆ ತಾವು ಸಂಪೂರ್ಣ ಮಾಹಿತಿ ಪಡೆದು ನಗದು ರಹಿತ ವ್ಯವಹಾರ ಅಳವಡಿಸಿಕೊಳ್ಳುವುದರ ಜೊತೆಗೆ ತಮ್ಮ ಎಲ್ಲಾ ಸದಸ್ಯರಿಗೆ ಈ ಬಗ್ಗೆ ತಿಳುವಳಿಕೆ ನೀಡಿ ದೇಶದ ಅಭಿವೃದ್ಧಿ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡಾಗ ಸಹಕಾರಿ ಸಂಸ್ಥೆಗಳು ರಾಷ್ಟ್ರೀಯ ಮುಖ್ಯವಾಹಿನಿಗಳಲ್ಲಿ ಕಾರ್ಯನಿರ್ವಹಿಸಿದಂತಾಗುತ್ತದೆ, ಪ್ರಗತಿಗೆ ಪೂರಕವಾಗುತ್ತದೆ, ಸೌಹಾರ್ದ ಸಹಕಾರಿ ಚಳುವಳಿ ಅಭಿವೃದ್ಧಿ ಪಥದತ್ತ ಸಾಗುತ್ತದೆ. ■

ಜ್ಞಾನ ಜ್ಯೋತಿ

ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

ಕ್ಷಣದ ಮಹತ್ವ ಹಾಗೂ ಶ್ರೀಮಂತಿಕೆ

ಪ್ರತಿ ಕ್ಷಣ... ಕ್ಷಣ... ನಹಿ ಕಶ್ಚಿತ್ ಕ್ಷಣಮಪಿ ಜಾತುತಿಷ್ಟತಿ ಕರ್ಮಕೃತ್. ನಹಿ ಕಶ್ಚಿತ್ ಕ್ಷಣಮಪಿ ಜಾತುತಿಷ್ಟತಿ ಅಕರ್ಮಕೃತ್.... ಕರ್ಮ ಮಾಡದೆ ಒಂದು ಕ್ಷಣ ಕೂಡ ಈ ಜಗತ್ತಿನಲ್ಲಿ ಒಂದು ವಸ್ತುವಿಲ್ಲ. ಪ್ರತಿ ಕ್ಷಣವನ್ನು ಮೂರು ರೀತಿಯಿಂದ ಬಳಸುವುದು.

1. ಕೆಲಸ ಮಾಡಿಕೊಳ್ಳುತ್ತಾ ಆ ಕ್ಷಣವನ್ನು ಶ್ರೀಮಂತ ಮಾಡುವುದು.
2. ವಿಚಾರ ಮಾಡಿಕೊಳ್ಳುತ್ತಾ ಆ ಕ್ಷಣವನ್ನು ಶ್ರೀಮಂತ ಮಾಡುವುದು.
3. ಅನುಭವಿಸುತ್ತಾ ಆ ಕ್ಷಣವನ್ನು ಶ್ರೀಮಂತ ಮಾಡುವುದು.

ಇಲ್ಲಿ ಒಂದಿಷ್ಟು ಹೂವು ಇಟ್ಟಿದ್ದಾರೆ, ಸುಂದರವಾಗಿ ಇಟ್ಟಿದ್ದಾರೆ, ಹಸಿರಾಗಿದೆ, ಕೆಂಪು ಇದೆ, ಬಿಳಿ ಇದೆ, ಅದಕ್ಕೊಂದು ರೂಪ ಕೊಟಿದ್ದಾರೆ, ಬಹಳ ಸುಂದರವಾಗಿ ಹೊಂದಿಸಿ ಇಟ್ಟಿದ್ದಾರೆ. ಇದನ್ನು ನೋಡುತೇನೆ. ಇದು ಅನುಭವ. Seeing is also an experience, to see is to experience. ಇದನ್ನು ನೋಡುತ್ತೇನೆ. ಇದರ ಸೌಂದರ್ಯ, ಇದರ ರೂಪ ಮನಸ್ಸನ್ನು ಅರಳಿಸುತ್ತದೆ. ನಾನು ಸಂತೋಷದಿಂದ ಇದನ್ನು ಅನುಭವಿಸುತ್ತೇನಲ್ಲಾ... ಇದನ್ನು ಅನುಭವಿಸುವುದಕ್ಕೆ ಈ ಕ್ಷಣ ನನ್ನನ್ನು ಶ್ರೀಮಂತ ಮಾಡುತ್ತದೆ. ಸುಂದರ ಮಾಡುತ್ತದೆ. ಈಗ ನನ್ನ ತಲೆಯೊಳಗೆ ಈ ಕ್ಷಣ ಹೂವಿದೆ. ಈ ಕ್ಷಣ ಹಸಿರಿದೆ. ಈ ಕ್ಷಣ ಸೌಂದರ್ಯ ತುಂಬಿದೆ. ಅಂದರೆ ಈ ಕ್ಷಣದ ಬದುಕು ಸುಂದರವಾಗಿದೆ. ಈಗ ನನ್ನ ಮನಸ್ಸಿನಲ್ಲಿ ಬಡವ ಅನ್ನುವುದು ಇಲ್ಲ, ಈ ಕ್ಷಣದಲ್ಲೂ ಇಲ್ಲ. ಆದ್ದರಿಂದ ನಾನು ಶ್ರೀಮಂತ.

ಈ ಕ್ಷಣದಲ್ಲಿ ನಾನು ಯಾರನ್ನೂ ದ್ವೇಷ ಮಾಡುತ್ತಿಲ್ಲ, ಮನಸ್ಸು ಸಮಾಧಾನವಾಗಿರುತ್ತದೆ. ಹೀಗಾಗಿ ಪ್ರತಿ ಕ್ಷಣವನ್ನು ಶಾಂತ ಮಾಡುವುದು, ಕ್ಷಣದಲ್ಲಿ ಶಾಂತಿ, ಸೌಖ್ಯ, ಸೌಂದರ್ಯ, ಸಮೃದ್ಧಿ, ಸಿರಿವಂತಿಕೆಯನ್ನು ಕಾಣುವುದು. ಈ ಕ್ಷಣ ಯಾವುದಾದರೊಂದು ವಿಚಾರ ತಲೆಯಲ್ಲಿ ಸುಳಿಯಿತು... ತಿಳಿವಳಿಕೆ ಹೆಚ್ಚಾಯಿತು.

ಅಂದರೆ ಮನಸ್ಸು ಶ್ರೀಮಂತವಾಗುತ್ತದೆ. ಬದುಕು ಶ್ರೀಮಂತವಾಗುತ್ತದೆ. ಈ ಕ್ಷಣ ನಾನು ಏನಾದರೊಂದು ಕೆಲಸ ಮಾಡುತ್ತೇನೆ. ಕೈಯಿಂದ ಈ ಕ್ಷಣ ಶ್ರೀಮಂತವಾಗುತ್ತದೆ. ಎದೆಯಿಂದ ಶ್ರೀಮಂತಿಕೆ, ತಲೆಯಿಂದ ಶ್ರೀಮಂತಿಕೆ, ಕೈಗಳಿಂದ ಶ್ರೀಮಂತಿಕೆ.... ಇದು ಜೀವನ. ಹೀಗೆ ನಮ್ಮ ಬದುಕನ್ನು ಕಟ್ಟಬೇಕಾಗುತ್ತದೆ.

ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಪರವಾಗಿ ಸಹಕಾರ ಹಾಗೂ ಸಕ್ಕರೆ ಸಚಿವರಾದ ಶ್ರೀ ಹೆಚ್.ಎಸ್.ಮಹದೇವಪ್ರಸಾದರವರಿಗೆ ಶ್ರದ್ಧಾಂಜಲಿ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವರವರ ಅಧ್ಯಕ್ಷತೆಯಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ಸಭೆ ಸೇರಿ, ಕರ್ನಾಟಕ ಸರ್ಕಾರದ ಶ್ರೀ ಸಿದ್ಧರಾಮಯ್ಯನವರ ಸಚಿವರ ಸಂಪುಟದ ಹಿರಿಯರಾದ ಮತ್ತು ಸಹಕಾರ ಹಾಗೂ ಸಕ್ಕರೆ ಸಚಿವರಾಗಿದ್ದ ಶ್ರೀ ಹೆಚ್.ಎಸ್.ಮಹದೇವಪ್ರಸಾದರವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಿದರು.

ಶ್ರೀಯುತರು ಅತ್ಯಂತ ಉತ್ತಮ ರೀತಿಯಲ್ಲಿ ಸಹಕಾರ ಕ್ಷೇತ್ರವನ್ನು ಮುನ್ನಡೆಸಿದವರು. ರಾಜ್ಯದ ರೈತರಿಗೆ ಸಹಕಾರ ಕ್ಷೇತ್ರದ ಮೂಲಕ ಅನೇಕ ಸೌಲಭ್ಯಗಳನ್ನು ಒದಗಿಸುವ ಪ್ರಯತ್ನ ಮಾಡಿದವರು. ಅವರ ಅಗಲಿಕೆ ಒಬ್ಬ ಉತ್ತಮ ಸಹಕಾರ ಸಚಿವರನ್ನು ಹಾಗೂ ಸಹಕಾರ ಕ್ಷೇತ್ರದ ಒಬ್ಬ ಹಿತಚಿಂತಕರನ್ನು ಕಳೆದುಕೊಂಡಿದೆ. ಅವರ ಅಗಲಿಕೆ ಸಹಕಾರ ಕ್ಷೇತ್ರಕ್ಕೆ ತುಂಬಲಾರದ ನಷ್ಟ ಎಂದು ಶ್ರೀ ಹೆಚ್.ವಿ.ರಾಜೀವರವರು ಹೇಳಿದರು.

ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಶ್ರೀಯುತರು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಬಹಳವಾಗಿ ಪ್ರೋತ್ಸಾಹಿಸಿದವರು, ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದವರು ಮತ್ತು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಅನೇಕ ಬಾರಿ ಸರಕಾರದ ಬದ್ಧತೆಯನ್ನು ಪ್ರದರ್ಶಿಸಿದವರು, ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ, ಸಂಯುಕ್ತ ಸಹಕಾರಿಗೆ ವಿಶೇಷ ದಾವಾ ಪಂಚಾಯಿತಿ ನ್ಯಾಯಾಲಯ ಮಂಜೂರಾತಿಗಳು, ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆ ಜಾರಿ ಅವರು ನೀಡಿದ ನಿರಂತರ ಪ್ರೋತ್ಸಾಹ ಶ್ರೀಯುತರ ಅವಧಿಯಲ್ಲಿ ಮರೆಯಲಾರದ ವಿಷಯಗಳು. ಶ್ರೀಯುತರ ನಿಧನದಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಒಬ್ಬ ಉತ್ತಮ ಸಹಕಾರಿ ಸಚಿವರನ್ನು ಹಾಗೂ ಸೌಹಾರ್ದ ಕ್ಷೇತ್ರದ ಹಿತಚಿಂತಕರನ್ನು ಮತ್ತು ಸ್ನೇಹಿತನನ್ನು ಕಳೆದುಕೊಂಡಂತಾಗಿದೆ.

ಪರಮಾತ್ಮನು ಶ್ರೀಯುತರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಮತ್ತು ಶ್ರೀಯುತರ ಕುಟುಂಬದವರಿಗೆ ಅವರ ಅಗಲಿಕೆಯ ನೋವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ದಯಪಾಲಿಸಲಿ ಎಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಪರವಾಗಿ ಹಾಗೂ ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳ ಪರವಾಗಿ ಶ್ರದ್ಧಾಂಜಲಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ರಾಜ್ಯದಾದ್ಯಂತ ಸೌಹಾರ್ದ ಸಹಕಾರಿಗಳು ಸಹ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

16ನೇ ತಂಡದ ಹತ್ತು ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ

ತರಬೇತಿಯಿಂದ ಅಭಿವೃದ್ಧಿ ಸಾಧ್ಯ – ಶ್ರೀ ಹೆಚ್.ವಿ.ರಾಜೀವ

ಬೆಂಗಳೂರು : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ದಿನಾಂಕ 15–12–2016 ರಿಂದ 24–12–2016 ರವರೆಗೆ ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಏರ್ಪಡಿಸಿದ್ದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದಲ್ಲಿ ದಿನಾಂಕ 15–12–2016ರಂದು ನಡೆದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು ಅತ್ಯಂತ ಶಿಸ್ತುಬದ್ಧವಾಗಿ ಉತ್ತಮ ಗುಣಮಟ್ಟದ್ದಾಗಿ ವ್ಯವಸ್ಥೆಯಾಗಿರುತ್ತವೆ.

ಈ ರೀತಿಯ ತರಬೇತಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ಸಹಕಾರಿಯ ಅಭಿವೃದ್ಧಿಯಾಗುತ್ತದೆ. ಸಿಬ್ಬಂದಿಯವರ ಕಾರ್ಯಕ್ಷಮತೆ ಹೆಚ್ಚುತ್ತದೆ ಎಂದು ತಿಳಿಸಿದರು.

ಆಸಕ್ತಿಯಿಂದ ತರಬೇತಿಯಲ್ಲಿ ಭಾಗವಹಿಸುವಿಕೆಯಿಂದ ಹೆಚ್ಚು ಪ್ರಯೋಜನ – ಶ್ರೀ ಗುರುಸ್ವಾಮಿ

ಇದೇ ಸಂದರ್ಭದಲ್ಲಿ ಶ್ರೀ ಗುರುಸ್ವಾಮಿ, ಸಹಕಾರಿಗಳ ಜಂಟಿ ನಿಬಂಧಕರು, ಕಾನೂನು ಕೋಶ ಇವರಿಗೆ ಅಭಿನಂದನೆ ಸಲ್ಲಿಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀ ಗುರುಸ್ವಾಮಿಯವರು ಶಿಕ್ಷಣ, ತರಬೇತಿ ಹಾಗೂ ಪ್ರಚಾರ ಒಂದು ಸಹಕಾರ ಸಂಸ್ಥೆಯ ಅಭಿವೃದ್ಧಿಗೆ ಭದ್ರ ಬುನಾದಿ ಎನಿಸುತ್ತದೆ.

ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಪ್ರತಿಯೊಬ್ಬರಿಗೂ ತರಬೇತಿ ನೀಡುವುದರಿಂದ ಅವರ ಕ್ಷಮತೆ ಹಾಗೂ ಕಾರ್ಯದಕ್ಷತೆ ಹೆಚ್ಚುತ್ತದೆ. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಅವಲೋಕನ ಮಾಡಿದರೆ ಉತ್ತಮ ಮಟ್ಟದ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಇದು ಶ್ಲಾಘನೀಯ ಎಂದು ತಿಳಿಸಿದರು. ತರಬೇತಿ ಕಾರ್ಯಕ್ರಮಗಳಲ್ಲಿ ಆಸಕ್ತಿ ಬಹಳ ಮುಖ್ಯ. ಆಸಕ್ತಿಯಿಂದ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದಾಗ ತರಬೇತಿಯಿಂದ ಪ್ರಯೋಜನ ಸಾಧ್ಯಗುತ್ತದೆ ಎಂದರು.

ಸಂಯುಕ್ತ ಸಹಕಾರಿಯ ತರಬೇತಿಗಳು ಉತ್ತಮ ಗುಣಮಟ್ಟದ್ದಾಗಿವೆ - ಶ್ರೀ ವಸಂತ ನಾಯಕ

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡಿದ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಶ್ರೀ ವಸಂತ ನಾಯಕರವರು ಪ್ರಾರಂಭದಲ್ಲಿ ತಮ್ಮ ಸಂಸ್ಥೆಯಲ್ಲಿ ಸಂಯುಕ್ತ ಸಹಕಾರಿಯವರು ಆಯೋಜಿಸಿದ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ ಎಲ್ಲಾ ಶಿಬಿರಾರ್ಥಿಗಳಿಗೆ ತಮ್ಮ ಸಂಸ್ಥೆಯ ಪರವಾಗಿ ಸ್ವಾಗತ ಕೋರಿದರು.

ನಂತರ ಮಾತನಾಡಿದ ಶ್ರೀಯುತರು ನಾನು ಸಂಯುಕ್ತ ಸಹಕಾರಿಯ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಅವರು ಅಳವಡಿಸುವ ವಿಷಯಗಳು, ಸಂಪನ್ಮೂಲ ವ್ಯಕ್ತಿಗಳು, ಕಾರ್ಯಕ್ರಮದ ವ್ಯವಸ್ಥೆ, ಸಮಯ ಪಾಲನೆ ಇತ್ಯಾದಿಗಳು ಉತ್ತಮ ಗುಣಮಟ್ಟದ್ದಾಗಿವೆ, ಬೇರೆಲ್ಲಾ ಸಂಸ್ಥೆಗಳ ಕಾರ್ಯಕ್ರಮಗಳಿಗೂ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಿಗೂ ಬಹಳ ವ್ಯತ್ಯಾಸವಿದೆ ಎಂದು ತಿಳಿಸಿದರು.

ಬಹು ಚಟುವಟಿಕೆಗಳ ತರಬೇತಿ – ಶ್ರೀ ಶರಣಗೌಡ ಜಿ. ಪಾಟೀಲ

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಗಣ್ಯರನ್ನು ಹಾಗೂ ಶಿಬಿರಾರ್ಥಿಗಳನ್ನು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನು ಹೇಳುತ್ತಾ ಸಂಯುಕ್ತ ಸಹಕಾರಿಯ ವಿವಿಧ ತರಬೇತಿ ಕಾರ್ಯಕ್ರಮಗಳ ವಿವರಣೆ ನೀಡುತ್ತಾ ವಿಶೇಷವಾಗಿ 10 ದಿನಗಳ ವ್ಯಕ್ತಿತ್ವ ವಿಕಸ ತರಬೇತಿ ಅತ್ಯಂತ ಮಹತ್ವವನ್ನು ಪಡೆದಿದೆ.

ಇದರಲ್ಲಿ ಒಬ್ಬ ಶಿಬಿರಾರ್ಥಿಯ ಸಂಪೂರ್ಣ ವಿಕಸನದ ಬಗ್ಗೆ ಗಮನ ಹರಿಸಲಾಗುತ್ತದೆ. ಬೆಳಿಗ್ಗೆ ಯೋಗ, ನಂತರ ಸಹಕಾರ ಕ್ಷೇತ್ರದ ವಿವಿಧ ಆಯಾಮಗಳನ್ನು ಪರಿಚಯಿಸುವ ವಿಷಯಗಳು, ಆಹಾರ, ಆರೋಗ್ಯ, ಆಧ್ಯಾತ್ಮದಿಂದ ಮಾನಸಿಕ ಸ್ವಾಸ್ಥ್ಯ, ಪ್ರಾಯೋಗಿಕಗಳು, ವೇದಿಕೆ ಚಟುವಟಿಕೆಗಳು, ಯಶಸ್ವಿ ಸೌಹಾರ್ದ ಸಹಕಾರಿಗಳ ಜೊತೆಗೆ ಚರ್ಚೆ ಹಾಗೂ ಸಂವಾದ, ಸಹಕಾರ ಕ್ಷೇತ್ರದ ಚಟುವಟಿಕೆಗಳನ್ನು ಪರಿಚಯಿಸುವ ಅಧ್ಯಯನ ಪ್ರವಾಸ ಹಾಗೂ ಅನೌಪಚಾರಿಕ ಕಾರ್ಯಕ್ರಮ ಹೀಗೆ ಬಹುಚಟುವಟಿಕೆಗಳ ತರಬೇತಿ ಇದಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಹಾಗೂ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಪ್ರಾಧ್ಯಾಪಕರಾದ ಶ್ರೀ ಷಡಕ್ಷರಿಯವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಹೆಚ್.ಸಿ. ನಾಗರತ್ನರವರು ವಂದನೆ ಸಲ್ಲಿಸಿದರು.

ವೇದಿಕೆ ಕಾರ್ಯಕ್ರಮಗಳು : ತಂಡಗಳ ರಚನೆ, ತಂಡಗಳ ಮೂಲಕ ವೇದಿಕೆ ಕಾರ್ಯಕ್ರಮಗಳ ನಿರ್ವಹಣೆ, ನಿರೂಪಣೆ, ಪ್ರಾರ್ಥನೆ, ಮಿಲಿ, ಸುವಿಚಾರ, ಅತಿಥಿಗಳ ಸ್ವಾಗತ ಹಾಗೂ ಪರಿಚಯವನ್ನು ಶಿಬಿರಾರ್ಥಿಗಳಿಂದ ಮಾಡಿಸುವುದು.

ವಿವಿಧ ಚಟುವಟಿಕೆಗಳ ಪ್ರಾಯೋಗಿಕಗಳು :

1. ಶಿಬಿರಾರ್ಥಿಗಳಿಗೆ ಆಡಳಿತ ಮಂಡಲಿ ಸಭೆಯ ನೋಟೀಸು ಹಾಗೂ ವಾರ್ಷಿಕ ಮಹಾ ಸಭೆಯ ನೋಟೀಸು ಬರೆಯುವುದು, ಸಭೆಯ ಪೂರ್ವ ತಯಾರಿ ಸಭೆ ನಡೆಸುವುದು, ನಡವಳಿಗಳನ್ನು ದಾಖಲಿಸುವುದು ಮತ್ತು ನಡವಳಿಗಳ ಮೇಲೆ ಕ್ರಮವಿಡುವುದು.
2. ಲೆಕ್ಕಪತ್ರಗಳ ನಿರ್ವಹಣೆ – ಸಹಕಾರಿಗಳಲ್ಲಿ ಇಡಬಹುದಾದ ಲೆಕ್ಕಪತ್ರಗಳು, ಲೆಕ್ಕಪತ್ರಗಳ ವ್ಯವಸ್ಥೆ, ಜಮಾ–ಖರ್ಚು ತಃಖ್ತೆ, ಮಾಸಿಕ ಲಾಭ–ನಷ್ಟ ಖಾತೆ, ವ್ಯಾಪಾರಿ ತಃಖ್ತೆ, ಲಾಭ–ನಷ್ಟ ಖಾತೆ, ಬ್ಯಾಲೆನ್ಸ್ ಶೀಟ್, ಬ್ಯಾಂಕ್ ಸಮನ್ವಯ ಪಟ್ಟಿಗಳನ್ನು ಸಿದ್ಧಪಡಿಸುವುದು.
3. ದಾವೆ ದಾಖಲಿಸುವ ಸಮಯದಲ್ಲಿ ಅರ್ಜಿಯನ್ನು ಭರ್ತಿ ಮಾಡುವುದು. ಜೊತೆಗೆ ಲಗತ್ತಿಸಬಹುದಾದ ಪತ್ರಗಳು.
4. ಪ್ರತಿ ತಂಡದಿಂದ ಪ್ರತಿ ದಿನದ ತರಬೇತಿಯ ವರದಿ ಸಿದ್ಧಪಡಿಸುವುದು.

ಅನೌಪಚಾರಿಕ ಕಾರ್ಯಕ್ರಮಗಳು : ಪ್ರತಿದಿನ ನಿಗದಿತ ವಿಷಯಗಳ ಉಪನ್ಯಾಸಗಳು ಮುಗಿದ ನಂತರ ಅನೌಪಚಾರಿಕ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಲಾಗುತ್ತಿತ್ತು. ಇದರಲ್ಲಿ ಸಾಂಸ್ಕೃತಿಕ ತಂಡದವರು ಶಿಬಿರದ ಸಂಚಾಲಕರೊಂದಿಗೆ ಸಮಾಲೋಚನೆ ನಡೆಸಿ, ಕಾರ್ಯಕ್ರಮಗಳ ವ್ಯವಸ್ಥೆ ಮಾಡಲಾಗುತ್ತಿತ್ತು. ವಿವಿಧ ಶಿಬಿರಾರ್ಥಿಗಳು ಪ್ರತಿನಿಧಿಸುವ ಸೌಹಾರ್ದ ಸಹಕಾರಿಗಳ ಚಟುವಟಿಕೆಗಳ ಪರಿಚಯ, ಕುಮಾರಿ ಪೂರ್ಣಿಮಾರವರಿಂದ ಭರತನಾಟ್ಯ, ಶ್ರೀ ವೈ.ಗುಂಡೂರಾವ್‌ರವರಿಂದ ವ್ಯಕ್ತಿತ್ವ ವಿಕಸನದ ವಿವಿಧ ಹಂತಗಳ ಪರಿಚಯ, ಶ್ರೀ ಬಸಪ್ಪರವರಿಂದ ಮಂಕುತಿಮ್ಮನ ಕಗ್ಗದಲ್ಲಿ ಸಹಕಾರ, ಕ್ಯಾಂಪ್ಕೋ ಸಂಸ್ಥೆಯ ಹಾಗೂ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರವರಿಂದ ಸಹಕಾರಿ ಕಾರ್ಯಕರ್ತರ ಗುಣಲಕ್ಷಣಗಳು ಮತ್ತು ಅಧಿಪ್ರೇರಣೆಯ ಬಗ್ಗೆ ಉಪನ್ಯಾಸ ಹಾಗೂ ಶಿಬಿರಾರ್ಥಿಗಳಿಂದ ವಿವಿಧ ವಿನೋದಾವಳಿಗಳು, ನಾಟಕ ಮುಂತಾದವುಗಳನ್ನು ಏರ್ಪಡಿಸಲಾಗಿತ್ತು.

ಯೋಗಾಭ್ಯಾಸದಲ್ಲಿ ಶಿಬಿರಾರ್ಥಿಗಳು

ಯೋಗ ಶಿಕ್ಷಕರಾದ ಶ್ರೀ ಆಶಿಕ್‌ರವರಿಗೆ ಶಿಬಿರಾರ್ಥಿಗಳಿಂದ ಸನ್ಮಾನ

ಸಾಂಸ್ಕೃತಿಕ ಕಾರ್ಯಕ್ರಮ

ಅಧ್ಯಯನ ಪ್ರವಾಸ ದಿನಾಂಕ 23-12-2016 : ಸೌಹಾರ್ದ ಸಹಕಾರಿಗಳ ಕಾರ್ಯಾಚರಣೆಯನ್ನು ಅಧ್ಯಯನ ಮಾಡುವುದಕ್ಕಾಗಿ ಯಲಹಂಕದಲ್ಲಿರುವ ಶ್ರೀ ಮಹಾಯೋಗಿ ವೇಮನ ಸೌಹಾರ್ದ ಸಹಕಾರಿಗೆ ಭೇಟಿ ನೀಡಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಮುನಿರೆಡ್ಡಿ ಹಾಗೂ ಆಡಳಿತ ಮಂಡಲಿಯ ನಿರ್ದೇಶಕರುಗಳು ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ನಾಗೇಶ ಮತ್ತು ಸಿಬ್ಬಂದಿಯವರು ಸಹಕಾರಿಯ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

ಸಿಂಗನಾಯಕನ ಹಳ್ಳಿಯ ರೈತರ ಸೇವಾ ಸಹಕಾರ ಸಂಘಕ್ಕೆ ಭೇಟಿ ನೀಡಲಾಯಿತು. ಸಂಘದ ಅಧ್ಯಕ್ಷರಾದ ಶ್ರೀಮತಿ ವಾಣಿಶ್ರೀ ವಿಶ್ವನಾಥ ಹಾಗೂ ವ್ಯವಸ್ಥಾಪಕ ನಿರ್ದೇಶರಾದ ಶ್ರೀ ಕೃಷ್ಣಭಟ್‌ವರು ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ನಂತರ ದೊಡ್ಡಬಳ್ಳಾಪುರದ ಟೆಕ್ಸ್‌ಟೈಲ್ ಮ್ಯಾನುಫ್ಯಾಕ್ಚರರ್ಸ್ ಸಹಕಾರ ಬ್ಯಾಂಕಿಗೆ ಭೇಟಿ ನೀಡಲಾಯಿತು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಪಿ.ವಾಸುದೇವ ಹಾಗೂ ನಿರ್ದೇಶಕ ಮಂಡಲಿ ಮತ್ತು ವ್ಯವಸ್ಥಾಪಕರಾದ ಶ್ರೀಮತಿ ಎ.ಎಸ್. ಪುಷ್ಪಲತರವರು ಬ್ಯಾಂಕಿನ ಚಟುವಟಿಕೆಗಳ ಮಾಹಿತಿ ನೀಡಿದರು.

ಮಹಾಯೋಗಿ ವೇಮನ ಸೌಹಾರ್ದ ಸಹಕಾರಿಯ ಅಧ್ಯಯನ

ಶಿಬಿರಾರ್ಥಿಗಳೊಂದಿಗೆ ರೈತಸೇವಾ ಸಹಕಾರ ಸಂಘ, ಸಿಂಗನಾಯಕನಹಳ್ಳಿ ಅಧ್ಯಕ್ಷೆ ಶ್ರೀಮತಿ ವಾಣಿಶ್ರೀ ವಿಶ್ವನಾಥ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಕೃಷ್ಣಭಟ್

ಯಶಸ್ವಿ ಸೌಹಾರ್ದ ಸಹಕಾರಿಗಳ ಜೊತೆಗೆ ಸಮಾಲೋಚನೆ ಮತ್ತು ಸಂವಾದ ದಿನಾಂಕ 24-12-2016

ಉದಯ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಜಗದೀಶ ಮತ್ತು ಶ್ರೀ ಹರೀಶ, ಸೃಜನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್.ಕೆ.ಶ್ರೀನಿವಾಸ, ಯಶಸ್ವಿನಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಬಿ.ಎನ್.ನಾಗಮಣಿ ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎ.ವಿ.ಎನ್.ರಾವ್, ಜ್ಞಾನಶಾಲೆ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಶ್ರೀಧರ ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಗೋಪಾಲಕೃಷ್ಣ, ಸಮುದಾಯ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಎನ್.ಪಿ.ವಾದಿರಾಜ ಹಾಗೂ ದಿ ಪಾವಗಡ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿಯ ಅಧಿಕಾರಿಯಾದ ಶ್ರೀ ರಂಜಿತ ಕುಮಾರ ಹಾಗೂ ಶ್ರೀ ಮೋಹನರವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ತಮ್ಮ ತಮ್ಮ ಸೌಹಾರ್ದ ಸಹಕಾರಿಗಳ ಕಾರ್ಯ ಚಟುವಟಿಕೆಗಳನ್ನು ತಿಳಿಸಿದರು. ನಂತರ ಶಿಬಿರಾರ್ಥಿಗಳು ತಮಗೆ ಬೇಕಾದ ಮಾಹಿತಿಯನ್ನು ಸಂವಾದದ ಮೂಲಕ ಪಡೆದರು.

ಮೌಲ್ಯಮಾಪನ : ಶಿಬಿರದ ಕೊನೆಯ ದಿನ 24-12-2016ರಂದು 100 ಪ್ರಶ್ನೆಗಳಿಗೆ 90 ನಿಮಿಷದಲ್ಲಿ ಉತ್ತರಿಸುವ ಲಿಖಿತ ಪರೀಕ್ಷೆಯನ್ನು ಏರ್ಪಡಿಸಿ, ಪ್ರಶ್ನೆಗಳಿಗೆ ಶಿಬಿರಾರ್ಥಿಗಳು ಉತ್ತರಿಸಿದ ಪತ್ರಿಕೆಗಳನ್ನು ಆಂತರಿಕವಾಗಿ ಅವರಿಂದಲೇ ಮೌಲ್ಯಮಾಪನ ಮಾಡಿಸಲಾಯಿತು. ಶಿಬಿರಾರ್ಥಿಗಳಲ್ಲಿ ಸೌಹಾರ್ದ ಸಹಕಾರಿಗಳನ್ನು

ಯಶಸ್ವಿ ಸೌಹಾರ್ದ ಸಹಕಾರಿಗಳು ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರ ಜೊತೆಗೆ ಸಮಾಲೋಚನೆ ಹಾಗೂ ಸಂವಾದ ಕಾರ್ಯಕ್ರಮ

ಪ್ರತಿನಿಧಿಸುವ ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿಯ ಶ್ರೀ ಬಿ.ಜಿ.ಸಂಕೀರ್ತನ ಇವರಿಗೆ ಮೊದಲನೆಯ ಬಹುಮಾನ, ತುಮಕೂರಿನ ಸನ್‌ರೈಸ್ ಸೌಹಾರ್ದ ಸಹಕಾರಿಯ ಶ್ರೀ ಆರ್. ಕೃಷ್ಣಾಚಾರ ಇವರಿಗೆ ದ್ವಿತೀಯ ಬಹುಮಾನ ಮತ್ತು ಮಂಗಳೂರಿನ ಪೂರ್ಣಾನಂದ ಸೌಹಾರ್ದ ಸಹಕಾರಿಯ ಶ್ರೀ ಲಕ್ಷ್ಮೀದಾಸ ಕಾಮತ್ ಇವರಿಗೆ ಮೂರನೇ ಬಹುಮಾನ ನೀಡಲಾಯಿತು. ಸಂಯುಕ್ತ ಸಹಕಾರಿಯ ಅಧಿಕಾರಿಗಳಾದ ಶ್ರೀ ಬಲರಾಮ ಮತ್ತು ಶ್ರೀ ವೃಷಭನಾಥ್‌ರವರುಗಳು ಪರೀಕ್ಷೆಯಲ್ಲಿ ಎಲ್ಲರಿಗಿಂತ ಹೆಚ್ಚಿನ ಅಂಕ ಪಡೆದವರಾಗಿದ್ದು, ಅವರುಗಳಿಗೂ ಬಹುಮಾನ ನೀಡಲಾಯಿತು.

ಸಮಾರೋಪ ಕಾರ್ಯಕ್ರಮವನ್ನು ಶಿಬಿರಾರ್ಥಿಗಳಿಂದಲೇ ವ್ಯವಸ್ಥೆ ಮಾಡಿಸಿ, ಅವರುಗಳಿಗೆ ಇವೆಂಟ್ ಮ್ಯಾನೇಜ್‌ಮೆಂಟ್ ಬಗ್ಗೆ ತರಬೇತಿ ನೀಡಲಾಯಿತು.

ಸಹಕಾರ ಕ್ಷೇತ್ರ ಆರ್ಥಿಕ ಅಭಿವೃದ್ಧಿಗೆ ಪೂರಕ - ಶ್ರೀ ಕೆ.ಎಲ್. ನರಸಿಂಹಮೂರ್ತಿ

16ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ ಸಮಾರೋಪ ಭಾಷಣವನ್ನು ಮಾಡಿದ ಸಹಕಾರ ಇಲಾಖೆಯ ಜಂಟಿ ನಿಬಂಧಕರು ಹಾಗೂ ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿಯಾದ ಶ್ರೀ ಕೆ.ಎಲ್.ನರಸಿಂಹಮೂರ್ತಿಯವರು ಮಾತನಾಡಿ ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸಿ, ಅಭಿವೃದ್ಧಿ ಪಥದಲ್ಲಿ ಮುನ್ನಡೆಯಬೇಕಾದರೆ ಸದಸ್ಯರಿಗೆ ಶಿಕ್ಷಣ ಹಾಗೂ ಸಿಬ್ಬಂದಿಯವರಿಗೆ ತರಬೇತಿ ಅತ್ಯಂತ ಪ್ರಮುಖವಾದದ್ದು.

ಸಹಕಾರ ಕ್ಷೇತ್ರ ಪ್ರಜಾಪ್ರಭುತ್ವದ ತತ್ವಗಳ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವ್ಯವಸ್ಥೆಯಾಗಿರುವುದರಿಂದ ಪ್ರತಿಯೊಬ್ಬರಿಗೂ ವ್ಯವಸ್ಥೆಯ ಬಗ್ಗೆ ತಿಳುವಳಿಕೆ ಅಗತ್ಯ. ಅಂತಹ ತರಬೇತಿಯನ್ನು ಸಂಯುಕ್ತ ಸಹಕಾರಿಯವರು ಉತ್ತಮವಾಗಿ ನಿರ್ವಹಿಸುತ್ತಾ ಬಂದಿದ್ದಾರೆ. ಅವರಿಗೆ ಅಭಿನಂದನೆಗಳು ಎಂದು ತಿಳಿಸಿದರು.

ಸಮಾಜದ ಕನಿಷ್ಠ ವ್ಯಕ್ತಿಗೆ ಸೇವೆ ಕೊಡಿ – ಶ್ರೀ ಹೆಚ್.ವಿ.ರಾಜೀವ

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು ಮಾತನಾಡಿ ಸಹಕಾರಿ ವ್ಯವಸ್ಥೆ ಸಮಾಜದ ಕನಿಷ್ಠ ವ್ಯಕ್ತಿಯನ್ನು ಶೋಷಣೆ ಮುಕ್ತನನ್ನಾಗಿಸುವುದು ಮತ್ತು ಅವನನ್ನು ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯತ್ತ ಕೊಂಡೊಯ್ಯುವುದಾಗಿದೆ.

ಹೀಗಾಗಿ ಸಹಕಾರಿಯ ಸಿಬ್ಬಂದಿಯವರಿಗೆ ಹೆಚ್ಚಿನ ಜವಾಬ್ದಾರಿಯಿದೆ. ವಿಷಯಗಳ ಅಧ್ಯಯನ ಮಾಡಿ, ಸಮಾಜಮುಖಿಯಾಗಿ ಕಾರ್ಯನಿರ್ವಹಿಸುವ ಅಗತ್ಯ ಇದೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಶಿಬಿರಾರ್ಥಿಗಳಿಂದ ಪ್ರಾರ್ಥನೆ ಹಾಗೂ ಸಹಕಾರ ಗೀತೆಯಾದ ನಂತರ ಶಿಬಿರಾರ್ಥಿ ಶ್ರೀ ಸಂತೋಷ್‌ರವರು ಎಲ್ಲರನ್ನು ಸ್ವಾಗತಿಸಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಶಿಬಿರದ ವರದಿಯನ್ನು ಸಂಯುಕ್ತ ಸಹಕಾರಿಯ ಅಧಿಕಾರಿಯಾದ ಶ್ರೀ ರಾಜೇಶರವರು ಓದಿದರು. ಶಿಬಿರಾರ್ಥಿಗಳು ತಮ್ಮ ಅನಿಸಿಕೆಗಳನ್ನು ತಿಳಿಸಿದರು. ಶಿಬಿರಾರ್ಥಿ ಶ್ರೀ ವಿಕ್ರಮರವರು ನಿರೂಪಣೆ ಮಾಡಿದರು.

ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರ ಹಾಗೂ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿದ ವಿಜೇತರಿಗೆ ಮತ್ತು ತರಬೇತಿಯಲ್ಲಿ ನಡೆದ ಎಲ್ಲಾ ಚಟುವಟಿಕೆಗಳಲ್ಲಿ ಉತ್ತಮವಾಗಿ ಭಾಗವಹಿಸಿದ ಶಿಬಿರಾರ್ಥಿಗಳಿಗೆ ಬಹುಮಾನಗಳನ್ನು ಅತಿಥಿಗಳು ವಿತರಿಸಿದರು. ಕೊನೆಯಲ್ಲಿ ಸಂಯುಕ್ತ ಸಹಕಾರಿಯ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್.ಕೆ.ರವರು ವಂದನಾರ್ಪಣೆ ಸಲ್ಲಿಸಿದರು.

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ
ಶ್ರೀ ಹೆಚ್.ವಿ.ರಾಜೀವ್‌ರವರಿಗೆ ಶಿಬಿರಾರ್ಥಿಗಳಿಂದ ನೆನಪಿನ ಕಾಣಿಕೆ

ಕಾರ್ಯಕ್ರಮದಲ್ಲಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಪ್ರಾಧ್ಯಾಪಕರಾದ ಶ್ರೀ ಷಡಕ್ಷರಿಯವರು ಉಪಸ್ಥಿತರಿದ್ದು, ಶಿಬಿರಾರ್ಥಿಗಳನ್ನು ಉದ್ದೇಶಿಸಿ ಹಿತವಚನಗಳನ್ನು ಹೇಳಿದರು.

ಪ್ರಮಾಣ ಪತ್ರಗಳ ವಿತರಣೆ

ಬಹುಮಾನಗಳ ವಿತರಣೆ

ಸಮಾರೋಪ ಕಾರ್ಯಕ್ರಮದ ಗಣ್ಯರೊಂದಿಗೆ ಶಿಬಿರಾರ್ಥಿಗಳು

ಬಹುಮಾನಗಳು :

ಉತ್ತಮ ಪ್ರಾರ್ಥನೆ – ಅನಿತಾ
ಉತ್ತಮ ಮಿಲಿ – ಶ್ರೀ ಸಾಲೋಮನ್
ಉತ್ತಮ ಇನ್ಸ್ಟಂಟ್ ಮಿಲಿ – ಶ್ರೀ ಶಹಜಹಾದ್ ಖಾನ್
ಉತ್ತಮ ಸುವಿಚಾರ – ಶ್ರೀ ಅಮರೇಶ್
ಉತ್ತಮ ವರದಿ – ಶ್ರೀ ವಿಕ್ರಮ್
ಉತ್ತಮ ಶಿಬಿರಾರ್ಥಿ ಪುರುಷ ವಿಭಾಗ – ಶ್ರೀ ಸುಧೀರ್
ಮಹಿಳಾ ವಿಭಾಗ – ಶ್ರೀಮತಿ ಶಿಲ್ಪಾ ಬಿ. ಪಾಟೀಲ್

ತರಬೇತಿ ಕಾರ್ಯಕ್ರಮ ಉತ್ತಮವಾಗಿತ್ತು ಎಂದು ಶಿಬಿರಾರ್ಥಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಶ್ರೀ ಕೆ.ಎಲ್.ನರಸಿಂಹಮೂರ್ತಿಯವರಿಗೆ ಬೀಳ್ಕೊಡುಗೆ

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿ ಹಾಗೂ ಸಹಕಾರಿ ಇಲಾಖೆಯ ಜಂಟಿ ನಿಬಂಧಕರಾದ ಶ್ರೀ ಕೆ.ಎಲ್. ನರಸಿಂಹಮೂರ್ತಿಯವರು ದಿನಾಂಕ : 31–12–2016ರಂದು ವಯೋನಿವೃತ್ತಿ ಹೊಂದುತ್ತಿರುವ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಪರವಾಗಿ 16ನೇ ತಂಡದ ಸಮಾರೋಪ ಕಾರ್ಯಕ್ರಮದಲ್ಲಿ ಬೀಳ್ಕೊಡುಗೆ ನೀಡಲಾಯಿತು. ಈ ಸಂದರ್ಭದಲ್ಲಿ ದಾವಾ ಪಂಚಾಯಿತಿ ನ್ಯಾಯಾಲಯದ ಎಲ್ಲಾ ಸಿಬ್ಬಂದಿಯವರು ಉಪಸ್ಥಿತರಿದ್ದರು.

ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು ಶಾಲು ಹೊದಿಸಿ, ಹಾರ ಹಾಕಿ, ನೆನಪಿನ ಕಾಣಿಕೆಯನ್ನು ನೀಡಿದರು. ದಾವಾ ಪಂಚಾಯಿತಿ ನ್ಯಾಯಾಲಯದ ಸಿಬ್ಬಂದಿಯವರು ಹಾಗೂ ಶಿಬಿರಾರ್ಥಿಗಳು ಸಹ ಶ್ರೀಯುತರನ್ನು ಮಾಲಾರ್ಪಣೆ ಮಾಡಿ ಗೌರವಿಸಿದರು.

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದ ಪೂರ್ಣಾವಧಿ ಪೀಠಾಧಿಕಾರಿಯಾಗಿ ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀಮತಿ ಕೆ.ಎಂ.ಆಶಾ

ದಿನಾಂಕ : 02 ಜನವರಿ 2017 ರಿಂದ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದ ಪೂರ್ಣಾವಧಿ ಪೀಠಾಧಿಕಾರಿಯಾಗಿ ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀಮತಿ ಕೆ.ಎಂ. ಆಶಾರವರು ಕಾರ್ಯವಹಿಸಿಕೊಂಡಿರುತ್ತಾರೆ.

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದ ಸಮಾಚಾರ

ದಾವಾ ದಾಖಲಾತಿ : ಬೆಳಗಾವಿ ವಿಭಾಗದಿಂದ 651 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 257 ಸೇರಿದಂತೆ ಒಟ್ಟು 908 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 72 ಪ್ರಕರಣಗಳು ಇತ್ಯರ್ಥಗೊಂಡಿವೆ.

ಅಮಲ್ಜಾರಿ ಪ್ರಕರಣಗಳು : ಒಟ್ಟು 15 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 9 ಪ್ರಕರಣಗಳು ಇತ್ಯರ್ಥಗೊಂಡಿವೆ.

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ-IVA Part-IVA	ಬೆಂಗಳೂರು, ಶನಿವಾರ, ಡಿಸೆಂಬರ್ ೨೪, ೨೦೧೬ (ಪುಷ್ಯ ೩, ಶಕ ವರ್ಷ ೧೯೩೮) Bengaluru, Saturday, December 24, 2016 (Pushya 3, Shaka Varsha 1938)	ನಂ. ೧೫೦೦ No. 1500

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಸಿಒ 155 ಸಿಎಲ್‌ಎಂ 2016, ಬೆಂಗಳೂರು, ದಿನಾಂಕ : 24.12.2016

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2016ರ (2016ರ ಕರ್ನಾಟಕ ಅಧಿನಿಯಮ ಸಂಖ್ಯೆ 26) ಪ್ರಕರಣ (1) ಉಪ ಪ್ರಕರಣ (2)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸದರಿ ತಿದ್ದುಪಡಿಯಲ್ಲಿನ ಅವಕಾಶಗಳು ದಿನಾಂಕ : 24.12.2016ರಿಂದ ಜಾರಿಗೆ ಬರತಕ್ಕದೆಂದು ಅಧಿಸೂಚಿಸಲಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ವೆಂಕಟಸ್ವಾಮಿ
ಸರ್ಕಾರದ ಉಪ ಕಾರ್ಯದರ್ಶಿ,
ಸಹಕಾರ ಇಲಾಖೆ.

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು – 560 052.

ಸಂಖ್ಯೆ : ಆರ್‌ಎಸ್‌ಆರ್‌1107/ಎಕ್ಸ್‌ಎಂಸಿ/2016–17. ದಿನಾಂಕ : 07–10/11–2016

ಸುತ್ತೋಲೆ ಸಂಖ್ಯೆ – 252

ವಿಷಯ : ಸಹಕಾರ ಸಂಘಗಳು / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಗೆ ಸಕಾಲದಲ್ಲಿ ನಿರ್ವಾಚನಾಧಿಕಾರಿ (ರಿಟರ್ನಿಂಗ್ ಅಧಿಕಾರಿ) ನೇಮಕ ಮಾಡುವ ಕುರಿತು.

ರಾಜ್ಯದಲ್ಲಿರುವ ಸಹಕಾರ ಸಂಘಗಳು / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಚುನಾವಣೆಗೆ ಸಂಬಂಧಪಟ್ಟಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಾವಳಿಗಳು 2004ರಲ್ಲಿ ಸ್ಪಷ್ಟ ಅವಕಾಶಗಳಿವೆ.

ಈ ನಿಯಮಗಳ ಪ್ರಕಾರ ಆಯಾ ಸಂಸ್ಥೆಗಳ ಮುಖ್ಯಕಾರ್ಯನಿರ್ವಾಹಕನು ನಿಗದಿತ ಕಾಲಾವಧಿಯೊಳಗೆ ಸಹಕಾರ ಚುನಾವಣಾ ಪ್ರಾಧಿಕಾರ ಹಾಗೂ ಚುನಾವಣಾಧಿಕಾರಿಗಳಿಗೆ ಆಡಳಿತ ಮಂಡಳಿ ಚುನಾವಣೆ ಬಗ್ಗೆ ಮಾಹಿತಿ ಸಲ್ಲಿಸಬೇಕಾಗಿದೆ. ಈ ರೀತಿ ಮಾಹಿತಿ ಸಲ್ಲಿಸುವುದು ಮುಖ್ಯಕಾರ್ಯನಿರ್ವಾಹಕರ / ಆಯಾ ಸಹಕಾರ ಸಂಘದ ಆದ್ಯ ಕರ್ತವ್ಯವಾಗಿದೆ.

ಈ ರೀತಿ ಮಾಹಿತಿ ಸಲ್ಲಿಸಿ, ಆಡಳಿತ ಮಂಡಳಿ ಅಧಿಕಾರಾವಧಿ ಅಂತ್ಯಗೊಳ್ಳುತ್ತದೆ ಎಂದು ತಿಳಿಸಿ ಹೊಸ ಆಡಳಿತ ಮಂಡಳಿಗೆ ಚುನಾವಣೆ ಜರುಗಿಸಲು ನಿರ್ವಾಚನಾಧಿಕಾರಿ (ರಿಟರ್ನಿಂಗ್ ಅಧಿಕಾರಿ) ನೇಮಿಸಲು ಸಂಘಗಳು ಸಕಾಲದಲ್ಲಿ ಪ್ರಸ್ತಾವೆ ಸಲ್ಲಿಸಿದ್ದರೂ ಸಹ ವೃಥಾ ಪತ್ರ ವ್ಯವಹಾರ ನಡೆಸಿ ಅಥವಾ ನಿರ್ವಾಚನಾಧಿಕಾರಿ ನೇಮಿಸಲು ಯಾವುದೇ ಕ್ರಮ ಕೈಗೊಳ್ಳದೆ ಸಕ್ಷಮ ಪ್ರಾಧಿಕಾರಿಗಳು ಮೌನವಾಗಿರುವುದು ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ. ತತ್ಪರಿಣಾಮವಾಗಿ ಹಾಲಿ ಇರುವ ಆಡಳಿತ ಮಂಡಳಿ ಅಧಿಕಾರಾವಧಿ ಅಂತ್ಯಗೊಂಡು ಹೊಸ ಆಡಳಿತ ಮಂಡಳಿಯೂ ಸಹ ರಚನೆಗೊಳ್ಳದೆ ಶೂನ್ಯಾವಸ್ಥೆ ಉಂಟಾಗುವ ಪ್ರಸಂಗಗಳು ಉದ್ಭವಿಸುತ್ತವೆ. ಅಲ್ಲದೆ ಕೆಲವು ಸಹಕಾರಿ ಸಂಘ ಸಂಸ್ಥೆಗಳು, ಸೌಹಾರ್ದ ಸಂಘ ಸಂಸ್ಥೆಗಳು

ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ ನಿರ್ವಾಚನಾಧಿಕಾರಿ ನೇಮಕಕ್ಕೆ ಸಕಾಲದಲ್ಲಿ ಪ್ರಸ್ತಾವೆ ಸಲ್ಲಿಸಿದ್ದರೂ, ಸಂಬಂಧಿತ ಪ್ರಾಧಿಕಾರವು ನಿರ್ವಾಚನಾಧಿಕಾರಿಯನ್ನು ನೇಮಿಸದಿರುವುದನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದು ಈ ರೀತಿಯ ನಡೆಯನ್ನು ನ್ಯಾಯಾಲಯವು ಅನೇಕ ಸನ್ನಿವೇಶಗಳಲ್ಲಿ ಆಕ್ಷೇಪಿಸಿದೆ.

ಆದ್ದರಿಂದ ಸಹಕಾರ ಚುನಾವಣಾ ಪ್ರಾಧಿಕಾರ ಹಾಗೂ ಅಧಿಕಾರ ಪ್ರತ್ಯಾಯೋಜಿತ ಚುನಾವಣಾ ಅಧಿಕಾರಿಗಳಿಗೆ ಈ ಮೂಲಕ ತಿಳಿಯಬಯಸುವುದೇನೆಂದರೆ ಇನ್ನು ಮುಂದೆ ಇಂತಹ ಸನ್ನಿವೇಶಕ್ಕೆ ಅವಕಾಶ ನೀಡದೆ ನಿಯಮಗಳಲ್ಲಿ ನಿಗದಿಪಡಿಸಿರುವ ಅವಧಿಯೊಳಗೆ ಯಾವುದೇ ಸಹಕಾರ ಸಂಘದ ಆಡಳಿತ ಮಂಡಳಿ ಅಥವಾ ಪದಾಧಿಕಾರಿಗಳ ಚುನಾವಣೆಗೆ ನಿರ್ವಾಚನಾಧಿಕಾರಿ ನೇಮಿಸಲು ಪ್ರಸ್ತಾವೆ ಸಲ್ಲಿಸಿದ ಸಂದರ್ಭದಲ್ಲಿ ವಿಶೇಷ ಗಮನಹರಿಸಿ ವಿಳಂಬಕ್ಕೆ ಅವಕಾಶ ನೀಡದೆ ಕೂಡಲೇ ನಿರ್ವಾಚನಾಧಿಕಾರಿ ನೇಮಿಸಿ ಕಾನೂನು ಪಾಲನೆ ಮಾಡಲು ನಿರ್ದೇಶಿಸಿದೆ.

(ಎಂ.ಕೆ.ಅಯ್ಯಪ್ಪ ಭಾ.ಆ.ಸೇ.)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು – 560 052.

ಸಂಖ್ಯೆ : ಆರ್ಎಸ್ಆರ್/206/ಎಕ್ಸ್ಎಂಸಿ/2016–17 ದಿನಾಂಕ : 27–12–2016

ಸುತ್ತೋಲೆ ಸಂಖ್ಯೆ–255

ವಿಷಯ : ಸಹಕಾರ ಸಂಘಗಳಲ್ಲಿ ಸಿಬ್ಬಂದಿ ನೇಮಕಾತಿಗೆ ಸಹಕಾರ ಸಂಘಗಳ ನಿಬಂಧಕರ ಪ್ರತಿನಿಧಿ ಯೋಜನೆ ಕುರಿತು ಸ್ಪಷ್ಟನೆ ನೀಡುವ ಬಗ್ಗೆ.
ಉಲ್ಲೇಖ : ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿಕ್ಕಬಳ್ಳಾಪುರ ಉಪವಿಭಾಗ, ಇವರ ಪತ್ರ ಸಂ.ಸನಿ/48/ದೂರರ್ಜಿ/ಸಿಆರ್/12/2016–17, ದಿನಾಂಕ 25–7–2016.

––

ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960ರ ನಿಯಮ 17ಎ ಪ್ರಕಾರ ಸಹಕಾರ ಸಂಘದ ಸಿಬ್ಬಂದಿ ನೇಮಕಾತಿಗೆ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿ ರಚನೆಗೆ ಅವಕಾಶವಿದೆ.

(1) ಸಂಬಂಧಿತ ಸಹಕಾರ ಸಂಘದ ಅಧ್ಯಕ್ಷರು.
(2) ಸಹಕಾರ ಸಂಘದ ಆಡಲಿತ ಮಂಡಲಿಯು ಆಯ್ಕೆ ಮಾಡುವ ಅದೇ ಸಹಕಾರ ಸಂಘದ ಓರ್ವ ನಿರ್ದೇಶಕರು.
(3) ಸಹಕಾರ ಸಂಘಗಳ ನಿಬಂಧಕರ ಪ್ರತಿನಿಧಿ.
(4) ಅನುಭವಿ ತಜ್ಞರೊರ್ವರು.
(5) ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕ.

ಅಂದರೆ, ಯಾವುದೇ ಸ್ವರೂಪದ ಸಹಕಾರ ಸಂಘವಾದರೂ ಕಾರ್ಯವ್ಯಾಪ್ತಿ ಏನೇ ಇದ್ದರೂ, ಸಹಕಾರ ಸಂಘಗಳ ನಿಬಂಧಕರು ನೇಮಕಾತಿ ಸಮಿತಿಗೆ ತಾವೇ ಹಾಜರಾಗಬಹುದು ಅಥವಾ ನೇಮಕಾತಿ ಸಮಿತಿಗೆ ಪ್ರತಿನಿಧಿಯನ್ನು ನೇಮಿಸುವ ಅಧಿಕಾರ ಹೊಂದಿರುತ್ತಾರೆ. ಅರ್ಥಾತ್ ನಿಯಮ 17ಎ ನ್ನು ಯಾವ ಪ್ರಾಧಿಕಾರಕ್ಕೂ ಪ್ರತ್ಯಾಯೋಜಿಸಿರುವುದಿಲ್ಲ.

ಈ ಕಛೇರಿಯ ಗಮನಕ್ಕೆ ಬಂದಿರುವ ಹಲವು ಪ್ರಕರಣಗಳಲ್ಲಿ ಹಾಗೂ ಸ್ಪಷ್ಟನೆ ಕೋರುತ್ತಿರುವ ಪ್ರಸಂಗಗಳಲ್ಲಿ ಜಿಲ್ಲಾ ಉಪನಿಬಂಧಕರು, ಉಪವಿಭಾಗೀಯ ಸಹಾಯಕ ನಿಬಂಧಕರು ಸ್ವಪ್ರೇರಣೆಯಿಂದ ನೇಮಕಾತಿ ಸಮಿತಿಗೆ ನಿಬಂಧಕರ ಪ್ರತಿನಿಧಿಯೆಂದು ಹೇಳಿಕೊಂಡು ಸಿಬ್ಬಂದಿ ನೇಮಕಾತಿ ಸಮಿತಿ ಸಭೆಗೆ ಹಾಜರಾಗುತ್ತಿದ್ದಾರೆ. ಇಂತಹ ನಿಲುವು, ವರ್ತನೆ, ನಿರ್ಣಯ ನಿಯಮಬಾಹಿರ.

ಈ ಹಿನ್ನೆಲೆಯಲ್ಲಿ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಬಯಸುವುದೇನೆಂದರೆ ಸಹಕಾರ ಸಂಘಗಳ ನಿಬಂಧಕರ ಆದೇಶವಿಲ್ಲದೆ ಯಾವುದೇ ಸಹಕಾರ ಸಂಘದ ನೇಮಕಾತಿ ಸಮಿತಿಗೆ ಹಾಜರಾಗತಕ್ಕದ್ದಲ್ಲ.

ಒಂದು ವೇಳೆ ನಿಯಮವನ್ನು ತಪ್ಪಾಗಿ ಅರ್ಥೈಸಿ, ತಪ್ಪುಗ್ರಹಿಕೆಯಿಂದ ನೇಮಕಾತಿ ಸಮಿತಿಗೆ ಹಾಜರಾದಲ್ಲಿ ಅಂತಹ ಅಧಿಕಾರಿ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. ಅಲ್ಲದೇ ಪೂರ್ಣ ನೇಮಕಾತಿ ಪ್ರಕ್ರಿಯೆಯೇ ಅಸಿಂಧುವೆಂದು ಈ ಮೂಲಕ ಸ್ಪಷ್ಟೀಕರಿಸಿದೆ.

(ಎಂ.ಕೆ.ಅಯ್ಯಪ್ಪ ಭಾ.ಆ.ಸೇ.)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

(ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ)

ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ವಿಭಾಗೀಯ ಕಛೇರಿಗಳಲ್ಲಿ 17ನೇ ಸೌಹಾರ್ದ ಸಹಕಾರಿ ದಿನಾಚರಣೆ : ಸಿಬ್ಬಂದಿಯವರಿಗಾಗಿ ಕ್ರೀಡಾ ಸ್ಪರ್ಧೆ ಹಾಗೂ ವಿವಿಧ ಚಟುವಟಿಕೆಗಳ ಏರ್ಪಾಡು

17ನೇ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ ಹಾಗೂ ಮೈಸೂರು ವಿಭಾಗದ ಸಿಬ್ಬಂದಿಯವರಿಗಾಗಿ ಕ್ರೀಡಾ ಸ್ಪರ್ಧೆ ಹಾಗೂ ವಿವಿಧ ಚಟುವಟಿಕೆಗಳ ಏರ್ಪಾಡು ಮಾಡಲಾಗಿತ್ತು. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಗೆದ್ದವರಿಗೆ ಪ್ರಶಸ್ತಿ ನೀಡಲಾಯಿತು.

ಸಹಕಾರಿ ಧ್ವಜಾರೋಹಣ ಕಾರ್ಯಕ್ರಮ

ಕೇಂದ್ರ ಕಚೇರಿ

ಮೈಸೂರು ವಿಭಾಗ

ಬೆಳಗಾವಿ ವಿಭಾಗ

ಕಲಬುರಗಿ ವಿಭಾಗ

ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ

ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಅಧ್ಯಕ್ಷರಾದ ಶ್ರೀ ಜಿನ್ನಪ್ಪಾ ಶಾಂತಪ್ಪಾ ಸಪ್ತಸಾಗರ ರವರಿಂದ ಸಹಕಾರಿಯ ಧ್ವಜಾರೋಹಣ ಮಾಡುವುದರ ಮೂಲಕ ಆಚರಣೆ.

ಸಪ್ತಗಿರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಅಧ್ಯಕ್ಷರಾದ ಶ್ರೀ ಎಂ ಗೋಪಾಲ ಕೃಷ್ಣರವರು ಸಹಕಾರಿಯ ಧ್ವಜಾರೋಹಣ ಮಾಡುವುದರ ಮೂಲಕ ಆಚರಣೆ.

ವಾಸವಿ ಸೌಹಾರ್ದ ಪತ್ತಿನ ಸಹಕಾರಿ ನಿ., ಚಳ್ಳಕೆರೆ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ.

ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಮುಸ್ಸಂಜೆಯ ವೃದ್ಧರ ಬಗ್ಗೆ ಅನಾದರಣ ಬೇಡ – ಶ್ರೀ ಬಿ.ಪುಟ್ಟಸ್ವಾಮಪ್ಪ

ಯಲಹಂಕ : ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹುಣಸಮಾರನಹಳ್ಳಿ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಕಾರ್ಯಕ್ರಮವನ್ನು ಅಧ್ಯಕ್ಷರಾದ ಶ್ರೀ ಬಿ.ಪುಟ್ಟಶಾಮಪ್ಪ ಉದ್ಘಾಟಿಸಿ, ಮಾತನಾಡಿದರು. ಸೌಹಾರ್ದ ದಿನಾಚರಣೆ ಅಂಗವಾಗಿ ಬೆಂಗಳೂರು ಉತ್ತರ ತಾಲ್ಲೂಕಿನ ಉತ್ತನಹಳ್ಳಿ ಗ್ರಾಮದಲ್ಲಿರುವ ಲಿಟ್ಲ ಡ್ರಾಪ್ಸ್ ಓಲ್ಡ್ ಏಜ್ಡ್ ಹೋಂನಲ್ಲಿರುವ 60 ಜನ ವೃದ್ಧಾಶ್ರಮ ವಾಸಿಗಳಿಗೆ ಸಹಕಾರಿಯ ವತಿಯಿಂದ ಹಣ್ಣು, ಬಿಸ್ಕತ್ ಮತ್ತು ಹಾಲು ವಿತರಿಸಲಾಯಿತು.

ತುಂಗಭದ್ರಾ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿಯಲ್ಲಿ ನಿರ್ದೇಶಕರಾದ ಶ್ರೀ ಅಮರೇಶಪ್ಪ ಮೈಲಾರರವರು ಸಹಕಾರಿಯ ಧ್ವಜಾರೋಹಣವನ್ನು ನೆರವೇರಿಸುವುದರ ಮೂಲಕ ಸೌಹಾರ್ದ ಸಹಕಾರಿ ದಿನದ ಆಚರಣೆ.

ಒಕ್ಕಲಿಗರ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ

ಬಳ್ಳಾರಿ : ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿಯ ದಿನಾಚರಣೆ ಪ್ರಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಮ್. ನೀಲಕಂಠಯ್ಯನವರು ಸಹಕಾರಿಯ ಪಿತಾಮಹ ದಿ॥ ಶ್ರೀ ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಸಹಕಾರಿ ಧ್ವಜಾರೋಹಣ ನೆರವೇರಿಸಿದ ನಂತರ ಸಹಕಾರಿಯ ಸಿಬ್ಬಂದಿಗಳಿಗೆ ಗುರುತಿನ ಚೀಟಿ ವಿತರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

(**ಗಮನಕ್ಕೆ :** ತಡವಾಗಿ ಬಂದ ಸೌಹಾರ್ದ ಸಹಕಾರಿ ದಿನಾಚರಣೆ ವರದಿಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.)

ಅಧ್ಯಕ್ಷರು–ಉಪಾಧ್ಯಕ್ಷರು ಆಯ್ಕೆ

ಸಪ್ತಋಷಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಗೆ ನೂತನ ಅಧ್ಯಕ್ಷರಾಗಿ ಶ್ರೀಮತಿ ಲಕ್ಷ್ಮೀ ಜೋಶಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಎಸ್.ಕೆ.ಸತ್ಯನಾರಾಯಣರವರು ಆಯ್ಕೆಯಾದ ಹಿನ್ನೆಲೆಯಲ್ಲಿ ಸಹಕಾರಿಯ ನಿರ್ದೇಶಕರು, ಅಧಿಕಾರಿ, ಸಿಬ್ಬಂದಿಗಳು ಹಾಗೂ ವಿಶೇಷ ಆಹ್ವಾನಿತರಾದ ಶ್ರೀ ಕೆ.ವಿ.ಪ್ರಕಾಶ್ ಭಾರದ್ವಾಜ್‌ರವರಿಂದ ಶ್ರೀಯುತರುಗಳಿಗೆ ಸನ್ಮಾನ.

ಶ್ರೀ ಪುಟ್ಟರಾಜ ಗವಾಯಿ – ಸಚೇತನ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬಂಕಾಪೂರ

ಶ್ರೀ ಹನುಮಂತಪ್ಪ ಉ. ವಡ್ಡರ
ಅಧ್ಯಕ್ಷರು

ಶ್ರೀ ಶಿದ್ದಪ್ಪ. ಮ. ಜಿಗಳಿ
ಉಪಾಧ್ಯಕ್ಷರು

ವಂದೇಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಿಂದ ಪ್ರವರ್ತಿತ ಸ್ವಸಹಾಯ ಸಂಘಗಳ ವಾರ್ಷಿಕ ಸಮಾವೇಶ

ಮೂಡುಬಿದಿರೆ : ವಂದೇಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೂಡುಬಿದಿರೆ ಸಹಕಾರಿಯ ವತಿಯಿಂದ ಪ್ರವರ್ತಿತ ಸ್ವ-ಸಹಾಯ ಸಂಘಗಳ ವಾರ್ಷಿಕ ಸಮಾವೇಶವನ್ನು ಮೂಡುಬಿದಿರೆ ಬ್ರಹ್ಮಶ್ರೀ ನಾರಾಯಣಗುರು ಸಭಾಭವನದಲ್ಲಿ ಸಹಕಾರಿಯ ಅಧ್ಯಕ್ಷರಾದ ಪ್ರೊ. ಎಂ.ವಾಸುದೇವ ಭಟ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದೇ ಸಂದರ್ಭದಲ್ಲಿ ರೋಟರಿ ಕ್ಲಬ್ ಆಫ್ ಮೂಡುಬಿದಿರೆ ಟೆಂಪಲ್ ಟೌನ್ ವತಿಯಿಂದ ರಕ್ತದೊತ್ತಡ ಮತ್ತು ಮಧುಮೇಹ ತಪಾಸಣಾ ಶಿಬಿರ ನಡೆಯಿತು.

ಸೈಂಟ್ ಮಿಲಾಗ್ರಿಸ್ ಸೌಹಾರ್ದ ಸಹಕಾರಿಯ 45ನೇ ಶಾಖೆಯ ಉದ್ಘಾಟನೆ

ಕಿನ್ನಿಗೋಳಿ : ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಲಿ., ಕಾರವಾರ ಸಹಕಾರಿಯ ನೂತನ 45ನೇ ಶಾಖೆಯನ್ನು ಕಿನ್ನಿಗೋಳಿಯಲ್ಲಿ ದಿನಾಂಕ : 17.12.2016ರಂದು ಗುರುಪ್ರಸಾದ್ ಕಾಂಪ್ಲೆಕ್ಸ್, ಮೊದಲನೇ ಮಹಡಿ, ಬಸ್ ಸ್ಟ್ಯಾಂಡ್, ಕಿನ್ನಿಗೋಳಿಯಲ್ಲಿ ಕಿನ್ನಿಗೋಳಿ ವಲಯದ ವಿಚಾರಣಾ ಗುರುಗಳು ಹಾಗೂ ಧರ್ಮಗುರುಗಳಾದ ವಂದನೀಯ ಫಾ.ವಿನ್ಸೆಂಟ್ ಮೊಂತೆರೊರವರು ಆಶೀರ್ವಚನ ಹಾಗೂ ಉದ್ಘಾಟನೆಯನ್ನು ನಡೆಸಿಕೊಟ್ಟರು.

ಉದ್ಘಾಟನಾ ಸಮಾರಂಭ

ಬೆಂಗಳೂರು : ಶ್ರೀ ಪದ್ಮ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ ಪ್ರಾರಂಭೋತ್ಸವವನ್ನು ಪ್ರಶಾಂತನಗರ ವಾರ್ಡ್‌ನ ಬಿ.ಬಿ.ಎಂ.ಪಿ. ಸದಸ್ಯ ಶ್ರೀ ಕೆ.ಉಮೇಶ್ ಶೆಟ್ಟಿ ಉದ್ಘಾಟಿಸಿದರು. ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಗೋಳ್ಳು ಅನಂತರಾಜು. ಕೆ.ಆರ್.ರವರು ಆಡಳಿತ ಮಂಡಲಿಯ ಸದಸ್ಯರೊಡಗೂಡಿ ಅತಿಥಿಗಳನ್ನು ಸತ್ಕರಿಸಿದರು. ಇದೇ ಸಂದರ್ಭದಲ್ಲಿ ಬೆಂಗಳೂರು ಕಿಡ್ನಿ ಫೌಂಡೇಶನ್ ಅವರಿಂದ ಸಹಕಾರಿಯ ಸದಸ್ಯರ ಕುಟುಂಬ ವರ್ಗದವರಿಗಾಗಿ ವಿಶೇಷ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ವಿವಿಧ ಶಾಖೆಗಳ ಉದ್ಘಾಟನೆ

ಬಾಸಗೋಡ : ಸೂರ್ಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಲಗೇರಿ ಸಹಕಾರಿಯ ಬಾಸಗೋಡ ಶಾಖೆಯನ್ನು ಅಂಕೋಲಾ ತಾಲ್ಲೂಕಿನ ಉದ್ದಿಮೆದಾರರಾದ ಶ್ರೀ ವಿಠ್ಠಲ ರಾಮಕೃಷ್ಣ ನಾಯಕ ಹಾಗೂ ಶ್ರೀ ದೇವಿದಾಸ ವಿಠೋಬ ನಾಯಕರವರು ಉದ್ಘಾಟಿಸಿದರು.

ಯರಗಟ್ಟಿ : ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ನಿ., ಯರಗಟ್ಟಿ ಸೌಹಾರ್ದ ಸಹಕಾರಿಯ ರಾಮದುರ್ಗ ಶಾಖೆಯನ್ನು ಶ್ರೀ ಗಣ ಚಕ್ರವರ್ತಿ ಚನ್ನಮಲ್ಲ ಶಿವಚಾರ್ಯ ಮಹಾಸ್ವಾಮಿಗಳು ತೊರಗಲ್ಲರವರು ಸಹಾರಿಯ ಸಂಸ್ಥಾಪಕರಾದ ಶ್ರೀ ತ್ರಿವಿಧ ದಾಸೋಹ ಮೂರ್ತಿಯಾದ ಸಿದ್ರಾಯಜ್ಜನವರ ಕಟಕೋಳ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು.

ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ತರಬೇತಿ ಕಾರ್ಯಾಗಾರ

ಉಡುಪಿ : ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ ಮತ್ತು ವೀರಭದ್ರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಪರ್ಕಳ ಇವರ ಜಂಟಿ ಆಶ್ರಯದಲ್ಲಿ ದಿನಾಂಕ 10.12.2016ರಂದು ಉಡುಪಿಯ ಹೋಟೆಲ್ ನೈವೇದ್ಯ ಇಲ್ಲಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಕಾಮತ್ ಮತ್ತು ಒಕ್ಕೂಟದ ಅಧ್ಯಕ್ಷರಾದ ಶ್ರೀ ಮಂಜುನಾಥ ಎಸ್.ಕೆ. ಹಾಗೂ ಗಣ್ಯರು ಉಪಸ್ಥಿತರಿದ್ದರು.

ತರಬೇತಿ ಅವಧಿಯಲ್ಲಿ ಆದಾಯ ತೆರಿಗೆ ಮತ್ತು ನೋಟು ಹಿಂತೆಗೆತ, ಜಿ.ಎಸ್.ಟಿ ಸೇವಾ ತೆರಿಗೆ, ಈಗಿನ ರಾಷ್ಟ್ರೀಕೃತ ಬ್ಯಾಂಕುಗಳು ಯಾವೆಲ್ಲಾ ನಿಯಮಗಳನ್ನು ಪಾಲಿಸುತ್ತಿವೆ, ಗ್ರಾಹಕರು ಹೇಗೆ ವ್ಯವಹರಿಸುತ್ತಿದ್ದಾರೆ, ಸಹಕಾರಿಗಳು ಹೇಗೆ ವ್ಯವಹರಿಸಬೇಕು ಹಾಗೂ ಇನ್ನಿತರ ವಿಷಯಗಳ ಬಗ್ಗೆ ತಿಳಿಸಲಾಯಿತು.

ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ವತಿಯಿಂದ ವಿವಿಧ ಸಂಘಟನೆಗಳ ಸಹಭಾಗಿತ್ವದಲ್ಲಿ ಉಚಿತ ವೈದ್ಯಕೀಯ ಶಿಬಿರ

ಆಜೇರು : ದಿನಾಂಕ 24-12-2016ರಂದು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಇದರ ಸಹಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್, ಪುತ್ತೂರು, ಶ್ರೀ ಮಹಿಷಮರ್ದಿನಿ ಭಜನಾ ಮಂಡಳಿ, ಆಜೇರು ಮತ್ತು ಯಕ್ಷನಮನ ಸಾಂಸ್ಕೃತಿಕ ಕಲಾ ಸಂಘ, ಆಜೇರು ಇವರ ಆಶ್ರಯದಲ್ಲಿ ಕೆ ಎಂ ಸಿ ಅತ್ತಾವರ, ಮಂಗಳೂರು ಹಾಗೂ ರೋಟರಿ ಕ್ಯಾಂಪ್ಕೋ ಬ್ಲಡ್ ಬ್ಯಾಂಕ್, ಪುತ್ತೂರು ಇವರ ಸಹಭಾಗಿತ್ವದಲ್ಲಿ ಶ್ರೀ ಮಹಿಷಮರ್ದಿನಿ ಭಜನಾ ಮಂಡಳಿ ಆವರಣದಲ್ಲಿ ಬೃಹತ್ ಉಚಿತ ವೈದ್ಯಕೀಯ ಶಿಬಿರ ಹಾಗೂ ಸ್ವಯಂಪ್ರೇರಿತ ರಕ್ತದಾನ ಶಿಬಿರ ನಡೆಯಿತು.

81 ಜನರು ಶಿಬಿರದಲ್ಲಿ ತಪಾಸಣೆಯನ್ನು ಮಾಡಿಕೊಂಡರು. ಔಷಧ ವಿತರಣೆಯೊಂದಿಗೆ 37 ಮಂದಿಗೆ ಕನ್ನಡಕ ವಿತರಿಸಲಾಯಿತು. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದ 4 ಜನರಿಗೆ ಗ್ರೀನ್‌ಕಾರ್ಡ್ ವ್ಯವಸ್ಥೆ ನೀಡಲಾಯಿತು.

ಉದ್ಯಮಶೀಲ ತರಬೇತಿ ಕಾರ್ಯಾಗಾರ

ಪುತ್ತೂರು : ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಇದರ ಸಹ ಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಮತ್ತು ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ, ಮಂಗಳೂರು ಇವರ ಜಂಟಿ ಆಶ್ರಯದಲ್ಲಿ ಡಿ. ದೇವರಾಜು ಅರಸು ಹಿಂದುಳಿದ ಅಭಿವೃದ್ಧಿ ನಿಗಮದ ಫಲಾನುಭವಿಗಳಿಗೆ ಉದ್ಯಮಶೀಲ ತರಬೇತಿ ಕಾರ್ಯಾಗಾರವು ದರ್ಬೆಯ ಭಾಲಾವಲೀಕಾರ್‌ಗೌಡ ಸಾರಸ್ವತ ಬ್ರಾಹ್ಮಣ ಸಮಾಜ ಸೇವಾ ಸಂಘದಲ್ಲಿ ನಡೆಯಿತು.

ಕಾರ್ಯಾಗಾರದಲ್ಲಿ ಇಲಾಖೆಯ ವಿವಿಧ ಯೋಜನೆಗಳು, ಮುದ್ರಾ ಯೋಜನೆ ಹಾಗೂ ಕ್ಯಾಶ್‌ಲೆಸ್ ವ್ಯವಹಾರಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳು, ಬ್ಯಾಂಕ್‌ನಿಂದ ದೊರೆಯುವ ವಿವಿಧ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು. ಕಾರ್ಯಾಗಾರದಲ್ಲಿ 70 ಮಂದಿ ಪಾಲ್ಗೊಂಡಿದ್ದರು.

ತೆರಿಗೆ ಯೋಜನೆ ಮತ್ತು ಅಪನಗದೀಕರಣ ಕುರಿತು ಮಾಹಿತಿ ಕಾರ್ಯಾಗಾರ

ಪುತ್ತೂರು : ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ದ ಸಹಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ವತಿಯಿಂದ ನಗದು ಅಪಮೌಲ್ಯೀಕರಣದ ಕುರಿತಂತೆ ಆರ್ಥಿಕ ಸಾಕ್ಷರತೆ ಯೋಜನೆಯ ಅಡಿಯಲ್ಲಿ "ತೆರಿಗೆ ಯೋಜನೆ ಮತ್ತು ಅಪನಗದೀಕರಣ" ಎಂಬ ವಿಷಯದ ಕುರಿತು ಮಾಹಿತಿ ಕಾರ್ಯಾಗಾರವು ಸಿ.ಎ. ಶ್ರೀ ಎಸ್.ಎಸ್. ನಾಯಕ್‌ರವರಿಂದ ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯಿತು.

ತರಬೇತಿ ಕಾರ್ಯಗಾರವನ್ನು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ದ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ್.ಎರವರು ಉದ್ಘಾಟಿಸಿ ಮಾತನಾಡಿದರು. ಸಮಾರೋಪ ಸಮಾರಂಭದಲ್ಲಿ

ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನ ಸಂಚಾಲಕರಾದ ಶ್ರೀ ರಾಧಾಕೃಷ್ಣರವರು ಉಪಸ್ಥಿತರಿದ್ದು, ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಗಳು

ಶ್ರೀ ಸಾಯಿ ಬಾಲಾಜಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ರಾಯಚೂರು ಸಹಕಾರಿಯ 9 ಜನ ನಿರ್ದೇಶಕರಲ್ಲಿ 8 ಜನ ನಿರ್ದೇಶಕರು ಸಹಕಾರಿಯ ನಿರ್ದೇಶಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಸಹಕಾರಿಯ ಅಧ್ಯಕ್ಷರು ಆಕಸ್ಮಿಕವಾಗಿ ಮರಣ ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಸಹಕಾರಿಯ ಆಡಳಿತ ಮಂಡಲಿಯು ಅಸ್ತಿತ್ವದಲ್ಲಿಲ್ಲದೇ ಇರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ವಿಜಯ್ ಬಿ.ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕಲಬುರಗಿ ವಿಭಾಗೀಯ ಕಛೇರಿ ಇವರನ್ನು ಆರು ತಿಂಗಳಿಗೆ ಮೀರದ ಅವಧಿಗೆ ಅಥವಾ ಸಹಕಾರಿಯ ಆಡಳಿತ ಮಂಡಲಿಯ ಎಲ್ಲಾ ಸ್ಥಾನಗಳಿಗೆ ಚುನಾವಣೆ ನಡೆದು ಆಡಳಿತ ಮಂಡಲಿಯ ಸದಸ್ಯರ ಸಂಖ್ಯೆಯು ಕೋರಂಗೆ ಅಗತ್ಯ ಸಂಖ್ಯೆ ಆಗುವವರೆಗೆ ಇದರಲ್ಲಿ ಯಾವುದು ಮೊದಲು ಆ ಸಮಯದವರೆಗೆ ವಿಶೇಷಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.

ಯು.ಕೆ. ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಯಲ್ಲಾಪುರ ಸಹಕಾರಿಯ ಶಾಖೆಗಳ ಉದ್ಘಾಟನೆ

ದಾಂಡೇಲಿ : ಯು.ಕೆ. ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಯಲ್ಲಾಪುರ ಸಹಕಾರಿಯ ದಾಂಡೇಲಿ ಶಾಖೆಯನ್ನು ಶ್ರೀ ಆರ್.ವಿ. ದೇಶಪಾಂಡೆ, ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು, ಕರ್ನಾಟಕ ಸರ್ಕಾರ ಇವರಿಂದ ಉದ್ಘಾಟನೆ.

ಹೊನ್ನಾವರ : ಯು.ಕೆ. ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಯಲ್ಲಾಪುರ ಸಹಕಾರಿಯ ಹೊನ್ನಾವರ ಶಾಖೆಯನ್ನು ಕ್ಯಾಂಪ್ಕೋ ಮತ್ತು ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರಿಂದ ಉದ್ಘಾಟನೆ. ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಶ್ರೀ ಎಂ.ಪಿ.ಕರ್ಕಿ, ಕೆಡಿಸಿಸಿ ಬ್ಯಾಂಕ್‌ನ ಉಪಾಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಜಿ.ಪಂ. ಮತ್ತು

ಕೆಡಿಸಿಸಿ ಬ್ಯಾಂಕ್‌ನ ನಿರ್ದೇಶಕರಾದ ಶ್ರೀ ಶಿವಾನಂದ ಹೆಗಡೆ, ಸಹಕಾರಿ ಯೂನಿಯನ್ ಅಧ್ಯಕ್ಷರಾದ ಶ್ರೀ ವಿ.ಎನ್.ಭಟ್ ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಅಭಿನಂದನೆ

ಶ್ರೀ ಎಸ್.ಆರ್. ಲಕ್ಷ್ಮೀಕಾಂತ–ರೆಡ್ಡಿ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಇವರು ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರಿಂದ ಅಭಿನಂದಿಸಲಾಯಿತು.

ಮುಂಬರುವ ಕಾರ್ಯಕ್ರಮಗಳು

- **ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ತರಬೇತಿ :** ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗಾಗಿ 6 ತರಬೇತಿ ಕಾರ್ಯಕ್ರಮಗಳನ್ನು ಜನವರಿ 2017ರ ಮಾಹೆಯಲ್ಲಿ ಆಯೋಜಿಸಲು ಉದ್ದೇಶಿಸಲಾಗಿದ್ದು, ದಿನಾಂಕ, ಸ್ಥಳ ಮತ್ತು ಅಗತ್ಯ ಮಾಹಿತಿಗಳನ್ನು ಮುಂಬರುವ ದಿನಗಳಲ್ಲಿ ತಿಳಿಸಲಾಗುವುದು.
- **ಸನ್ನದು ಲೆಕ್ಕಪರಿಶೋಧಕರಿಗೆ ತರಬೇತಿ :** ಸನ್ನದು ಲೆಕ್ಕಪರಿಶೋಧಕರಿಗೆ ತರಬೇತಿಯನ್ನು ಜನವರಿ 2017ರ ಮಾಹೆಯಲ್ಲಿ ಆಯೋಜಿಸಲು ಉದ್ದೇಶಿಸಲಾಗಿದ್ದು, ದಿನಾಂಕ, ಸ್ಥಳ ಮತ್ತು ಅಗತ್ಯ ಮಾಹಿತಿಗಳನ್ನು ಮುಂಬರುವ ದಿನಗಳಲ್ಲಿ ತಿಳಿಸಲಾಗುವುದು.

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಾಗಾರ ಸಕಾರಾತ್ಮಕ ಆಲೋಚನೆ ಸಕಾರಾತ್ಮಕ ಫಲಿತಾಂಶಗಳನ್ನು ನೀಡುತ್ತದೆ – ಶ್ರೀ ಹರೀಶ್

ಪುತ್ತೂರು : ದಿನಾಂಕ 18–12–2016ರಂದು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ದ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಾಗಾರವು ಶ್ರೀ ಹರೀಶ್ ಆರ್. ರವರಿಂದ ರೋಟರಿ ಸಭಾಂಗಣದಲ್ಲಿ ನಡೆಯಿತು. ಕಾರ್ಯಾಗಾರದಲ್ಲಿ ಸಹಕಾರಿಯ ಹಿರಿಯ ಅಧಿಕಾರಿ ವರ್ಗದವರು ಹಾಗೂ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಇ–ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆ

ಉಡುಪಿ : ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಕೃಷ್ಣಾ ಬಿಲ್ಡಿಂಗ್, ನೈವೇದ್ಯ ಹೋಟೆಲಿನ ಎರಡನೇ ಮಹಡಿ, ಉಡುಪಿ ಇಲ್ಲಿ ಇ–ಸ್ಟ್ಯಾಂಪಿಂಗ್ ಕೇಂದ್ರವನ್ನು ಸೌಹಾರ್ದ ಒಕ್ಕೂಟದ ನಿರ್ದೇಶಕರು ಹಾಗೂ ವಕೀಲರಾದ ಶ್ರೀ ಶಿರಿಯಾರ ಪ್ರಭಾಕರ ನಾಯಕ್‌ರವರು ಉದ್ಘಾಟಿಸಿದರು. ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಮಂಜುನಾಥ ಎಸ್.ಕೆ. ಇವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಶಿರಡಿ : ಸೌಹಾರ್ದ ಸಹಕಾರಿ ನಿ., ಚಿಕ್ಕಬಳ್ಳಾಪುರ ಸಹಕಾರಿಯ ಇ–ಸ್ಟ್ಯಾಂಪಿಂಗ್ ಕೇಂದ್ರದ ಪ್ರಾರಂಭೋತ್ಸವದಲ್ಲಿ ಅಧ್ಯಕ್ಷರು, ನಿರ್ದೇಶಕರು, ಕಾರ್ಯದರ್ಶಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ – 9 **"ನೋವಿಲ್ಲದರು ನೊಂದವರನು ಸಂತಯಿಸುತಿರೆ ಜೀವನವು ಕಡಿದಹುದೆ?"**

▶▶ ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ಆಧ್ಯಾತ್ಮಜೀವಿಯಾಗಿ, ಚಿಂತಕರಾಗಿದ್ದ ಡಿವಿಜಿಯವರು ತನ್ನ ಶ್ರೇಷ್ಠ ಕೃತಿ ಕಗ್ಗದಲ್ಲಿ ಜೀವನದ ಸಕಲ ಮಜಲುಗಳನ್ನು ಒಳಗೊಂಡ ಜೀವನ ಸಿದ್ಧಾಂತವನ್ನು ಸಂಗ್ರಹಿಸಿಡುತ್ತಾ, ಜೀವನದಲ್ಲಿ ಬರುವ ಕಷ್ಟಕಾರ್ಪಣ್ಯಗಳ, ಏರುತಗ್ಗುಗಳ, ಓರೆಕೋರೆಗಳ ನಿಂದೆಸ್ತುತಿ, ಮಾನಾಪಮಾನಗಳ ಬಗ್ಗೆಯೂ ಚಿಂತಿಸಿದ್ದಾರೆ. ಇಂತಹ ಕಷ್ಟಗಳು ಬಂದಾಗ ಮನುಷ್ಯನ ನಿಜವಾದ ಆತ್ಮಸ್ಥೈರ್ಯ ಕುಗ್ಗಿ ಕಂಗಾಲಾಗಿ ಪ್ರಥಮವಾಗಿ ದೈವದ ನೆರವನ್ನೂ, ಹಾಗೂ ತದನಂತರ ಸಹಪಾಠಿಗಳ ನೆರವಿಗಾಗಿ ಹಂಬಲಿಸುವುದು ಸಹಜ ಪ್ರಕ್ರಿಯೆಯೆಂದು ಒಪ್ಪಿದ್ದಾರೆ. ಅಂತಹ ನೋವಿಗೊಳಗಾದ ವ್ಯಕ್ತಿಗಳ ನೆರವಿಗೆ ಆಸರೆಯಾಗಿ ನಿಲ್ಲಬೇಕಾದ್ದು, ತನ್ನ ಕೈಯಿಂದಾದ ಸಹಾಯವನ್ನೆಸಗುವುದು ತನ್ಮೂಲಕ ನೊಂದ ಜೀವಿಗೆ ಸಾಂತ್ವನವನ್ನೀಯುವುದು ಪ್ರತಿ ಪ್ರಾಜ್ಞನ ಕರ್ತವ್ಯವೆಂದು ಹಿಂದಿನ ತತ್ವಜ್ಞರ, ವಿಚಾರವಂತರ, ಚಿಂತನಶೀಲರ ಅನಿಸಿಕೆಯಾಗಿದೆ. "ವಸುದೈವ ಕುಟುಂಬಂ" "ಸರ್ವೇಜನಾ ಸುಖಿನೋಭವಂತು" ಇತ್ಯಾದಿಗಳ ಮೂಲಕ ಜಗತ್ತೇ ಒಂದು ಕುಟುಂಬ, ಎಲ್ಲಾ ಪ್ರಜೆಗಳು ಸಹೋದರರೆಂಬ ವಿಶ್ವಭ್ರಾತೃತ್ವವನ್ನು ಹೊಂದಿ ಎಲ್ಲರೆಲ್ಲರ ನೆರವಿಗೆ ನಿಲ್ಲಬೇಕೆಂಬ ಅಂಶವನ್ನು ವ್ಯಕ್ತ ಪಡಿಸುವ ಡಿವಿಜಿಯವರ ಈ ಚಮತ್ಕಾರಿಕ ಪದ್ಯವನ್ನು ಗಮನಿಸಿ.

"ವೈವಿಧ್ಯವೊಂದು ಕೃಪೆ ನಮಗಿರುವ ಕಷ್ಟದಲಿ
ಆವರಿಸದಳಲ್ ಎಲ್ಲರನುಮೊಂದೆಸಮಯ
ನೋವಿಲ್ಲದರು ನೊಂದವರನು ಸಂತಯಿಸುತಿರೆ
ಜೀವನವು ಕಡಿದಹುದೆ ಮಂಕುತಿಮ್ಮ"

ಮಾನವ ಮಾತ್ರ ಏನು, ಮೃಗ, ಪಕ್ಷಿ ಹಾಗೂ ಸಸ್ಯ, ಮರಗಳಿಗೂ ಕಷ್ಟ ಬರುವುದುಂಟೆಂದು ಸರ್ವರೂ ಒಪ್ಪಿಕೊಳ್ಳುತ್ತಾರೆ. ಆದರೆ ಬರತಕ್ಕಂತಹ ಬೇಗೆಗಳು, ನೋವುಗಳು ಒಂದೇ ಸ್ವರೂಪದ್ದಾಗಿರದೇ ಬೇರೆ ಬೇರೆಯವರಿಗೆ ಬೇರೆ ಬೇರೆ ವಿಧದ ನೋವುಗಳು ಬಂದೊದಗುವುದು ದೈವದ ಕೃಪೆಯೆನ್ನುತ್ತಾರೆ. ಸಂಸಾರದ ಯಾರೊಬ್ಬ ಸದಸ್ಯನಿಗೆ ಕಿವಿನೋವು ಇದ್ದರೆ ಇನ್ನೊಬ್ಬರಿಗೆ ಬೇರೆಯದೇ ರೀತಿಯ ನೋವು ಬರಬಹುದೆಂದೂ, ಅಂತೆಯೇ ಬರುವಂತಹ ನೋವು ಸಹ ಎಲ್ಲರಿಗೂ ಒಂದೇ ಸಾರಿಗೆ ಬಂದೊದಗದೇ ವಿವಿಧ ರೂಪದಲ್ಲಿ ಬಂದೊದಗುವುದನ್ನು ಗಮನಿಸಿ ಅಂತಹ ನೋವಿಗೊಳಗಾದ ಮಾನವಾತ್ಮರಿಗೆ ನೋವಿಲ್ಲದವರು ಅಂದರೆ ಉತ್ತಮ ಸ್ಥಿತಿಯಲ್ಲಿರುವವರು, ಸಂಕಷ್ಟದ ತೀವ್ರತೆಯನ್ನು ಅರಿತು ನೆರವಿನ ಹಸ್ತವನ್ನು ಚಾಚುವುದರ ಮೂಲಕ ನೋವಿಗೊಳಗಾದ ವ್ಯಕ್ತಿಯ ಕಷ್ಟದ ತೀವ್ರತೆಯನ್ನು ಕಡಿಮೆಗೊಳಿಸ ಬಹುದಾಗಿದೆಯೆಂದು ಅಭಿಪ್ರಾಯ ಪಡುತ್ತಾರೆ.

ಇಂದುಟ್ಟಿ, ಮುಂದೆಂದೋ ಮೃತನಾಗಲಿರುವ ಮಾನವನು ತನ್ನ ಅನವರತ ದುಡಿಮೆ, ಸಂಗ್ರಹಣೆ, ಕೂಡಿಹಾಕುವಿಕೆಗಳಿಗೆ ಮಾತ್ರ ಗಮನವಿಡದೆ, ನಾವು ಈ ಜಗತ್ತಿನ ಯಾತ್ರೆಗೆ ಬಂದವರು ಕೆಲಕಾಲವಿದ್ದು, ಈ ಜೀವನಕ್ಕೆ ವಿದಾಯ ಹೇಳಬೇಕಾದವರು ತತ್ಕಾರಣ, ಬಂದ ದುಡಿಮೆಯ, ಸಂಗ್ರಹಣೆಯ ಧನವನ್ನು ಇತರ ಅರ್ಹ ಹಾಗೂ ಅವಶ್ಯಕತೆಯಿರುವವರಿಗೆ ನೀಡಿ ಜೀವನ ಸಾರ್ಥಕತೆಯನ್ನು ಪಡೆಯಿರೆಂಬುದು ತನ್ಮೂಲಕ ಸಂಕಷ್ಟದಲ್ಲಿರುವವರಿಗೆ ಸಹಕಾರ ನೀಡುತ್ತಾ ಸಹಕಾರ ಜೀವನವನ್ನು ಪ್ರೋತ್ಸಾಹಿಸಿರೆಂಬುದೇ ಈ ಪದ್ಯದ ರಹಸ್ಯಾರ್ಥವಾಗಿದೆ.

ಸಹಕಾರ ಸಂಸ್ಥೆಗಳ ಅಧ್ಯಕ್ಷರು ಹಾಗೂ ಮಹಿಳಾ ನಿರ್ದೇಶಕರುಗಳಿಗಾಗಿ ಮಾರ್ಚ್ 15 ರಿಂದ 17ರವರೆಗೆ ನವದೆಹಲಿಯಲ್ಲಿ ಎನ್‌ಸಿಸಿಇ (ರಾಷ್ಟ್ರೀಯ ಸಹಕಾರಿ ಯೂನಿಯನ್‌ನ ಅಂಗ ಸಂಸ್ಥೆ) ನೇತೃತ್ವದಲ್ಲಿ "ನಾಯಕತ್ವ ತರಬೇತಿ" ಶಿಬಿರ

ಸಹಕಾರ ಸಂಸ್ಥೆಗಳ ಅಧ್ಯಕ್ಷರು ಹಾಗೂ ಮಹಿಳಾ ನಿರ್ದೇಶಕರುಗಳಿಗಾಗಿ ದಿನಾಂಕ 15–03–2017 ರಿಂದ 17–03–2017ರವರೆಗೆ ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ (ರಾಷ್ಟ್ರೀಯ ಸಹಕಾರಿ ಯೂನಿಯನ್‌ನ ಅಂಗ ಸಂಸ್ಥೆ), ನವದೆಹಲಿಯಲ್ಲಿ "ನಾಯಕತ್ವ ತರಬೇತಿ" ಶಿಬಿರವನ್ನು ಏರ್ಪಡಿಸಲಾಗಿದೆ. ಭಾಗವಹಿಸುವವರಿಗೆ ಸ್ಲೀಪರ್ ಕ್ಲಾಸ್ ಪ್ರಯಾಣ ವೆಚ್ಚವನ್ನು, ವಸತಿ ಮತ್ತು ಊಟೋಪಚಾರ ವೆಚ್ಚಗಳನ್ನು ಎನ್‌ಸಿಸಿಇಯವರು ಭರಿಸುತ್ತಾರೆ. ಆಸಕ್ತರು ತಮ್ಮ ಎಲ್ಲಾ ವಿವರಗಳೊಂದಿಗೆ ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ, ನಂ.3, ಸಿರಿ ಇನ್ಸ್ಟಿಟ್ಯೂಷನಲ್ ಏರಿಯಾ, ಅಗಸ್ಟ್ ಕ್ರಾಂತಿ ಮಾರ್ಗ, ನವದೆಹಲಿ–110016, ದೂರವಾಣಿ ಸಂಖ್ಯೆ : 011–26861472, 26861007, ಫ್ಯಾಕ್ಸ್ : 011–41811158, E-mail : nccend@yahoo.co.in ಇವರನ್ನು ಸಂಪರ್ಕಿಸಲು ಕೋರಿದೆ.

ನಿಮ್ಮ ಪ್ರಶ್ನೆ

ನಮ್ಮ ಉತ್ತರ

ಬಿ.ವಿ. ರವೀಂದ್ರನಾಥ
